ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-1, July-August 2026, Pp. 35-48
©*IIMRD*, Mysuru
IIMRD JOURNALS
www.iimrd.com

# ಹೇಮಾವತಿ ಕಾದಂಬರಿ: ದಲಿತರ ದೇಗುಲ ಪ್ರವೇಶ

**ಡಾ. ಉಮೇಶ್ ಎಂ.ಆರ್**
ಕನ್ನಡ ಸಹಾಯಕ ಪ್ರಾಧ್ಯಾಪಕ, ದಯಾನಂದ ಸಾಗರ್ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು,
ಕುಮಾರಸ್ವಾಮಿ ಬಡಾವಣೆ, ಬೆಂಗಳೂರು.

**ಸಾರಾಂಶ: (Abstract)**

*ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ಹೇಮಾವತಿ' ಕಾದಂಬರಿಯು ಸಾಮಾಜಿಕ ಅಸಮಾನತೆ, ಜಾತಿ ವ್ಯವಸ್ಥೆ ಮತ್ತು ದಲಿತರ ದೇಗುಲ ಪ್ರವೇಶ ಹೋರಾಟವನ್ನು ಪರಿಣಾಮಕಾರಿಯಾಗಿ ಚಿತ್ರಿಸುವ ಮಹತ್ವದ ಕೃತಿಯಾಗಿದೆ. ಈ ಲೇಖನವು ಕಾದಂಬರಿಯಲ್ಲಿ ಪ್ರತಿಪಾದಿತ ದಲಿತ ದೇಗುಲ ಪ್ರವೇಶದ ವಿಚಾರವನ್ನು ಸಾಹಿತ್ಯಿಕ ಹಾಗೂ ಸಾಮಾಜಿಕ ದೃಷ್ಟಿಕೋನದಿಂದ ವಿಶ್ಲೇಷಿಸುತ್ತದೆ. ದಲಿತರ ಧಾರ್ಮಿಕ ಹಕ್ಕು, ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಆಶಯಗಳನ್ನು ಕಾದಂಬರಿಯ ಕಥಾವಸ್ತು ಹಾಗೂ ಪಾತ್ರಗಳ ಮೂಲಕ ಲೇಖಕರು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿದ್ದಾರೆ. ಜಾತಿ ಆಧಾರಿತ ತಾರತಮ್ಯ ಮತ್ತು ಅದನ್ನು ವಿರೋಧಿಸುವ ಸಾಮಾಜಿಕ ಚಳವಳಿಗಳ ಪ್ರತಿಫಲನವನ್ನು ಕಾದಂಬರಿಯು ಸಮರ್ಥವಾಗಿ ಬಿಂಬಿಸುತ್ತದೆ. ಕೃತಿಯು ಮಾನವೀಯ ಮೌಲ್ಯಗಳು, ಸಮಾನತೆ ಮತ್ತು ಸಾಮಾಜಿಕ ಪರಿವರ್ತನೆಯ ಅಗತ್ಯವನ್ನು ಒತ್ತಿ ಹೇಳುತ್ತದೆ. ಕನ್ನಡ ಕಾದಂಬರಿ ಸಾಹಿತ್ಯದಲ್ಲಿ ದಲಿತ ಸಂವೇದನೆ ಮತ್ತು ಸಾಮಾಜಿಕ ಸುಧಾರಣೆಯ ಚಿಂತನೆಗಳನ್ನು ಅರ್ಥಮಾಡಿಕೊಳ್ಳಲು ಈ ಅಧ್ಯಯನವು ಮಹತ್ವದ ಕೊಡುಗೆಯನ್ನು ನೀಡುತ್ತದೆ.*

**ಮುಖ್ಯಪದಗಳು (Keywords):** *ಗೊರೂರು ರಾಮಸ್ವಾಮಿ ಅಯ್ಯಂಗಾರ್, ಹೇಮಾವತಿ ಕಾದಂಬರಿ, ದಲಿತ ದೇಗುಲ ಪ್ರವೇಶ, ಸಾಮಾಜಿಕ ನ್ಯಾಯ, ಕನ್ನಡ ಕಾದಂಬರಿ ಸಾಹಿತ್ಯ.*

## ಪೀಠಿಕೆ

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ರಚಿಸಿದ ಸಾಮಾಜಿಕ ಕಾದಂಬರಿ. ಅಂದಿನ ಮೈಸೂರು ರಾಜ್ಯದ ಕಾವೇರಿ ಅಗ್ರಹಾರದಲ್ಲಿ ನಡೆದಿರುವ ದಲಿತರ ಜೀವನ ಚಿತ್ರಣವನ್ನು ಚಿತ್ರಿಸುವುದು. ಹೊಲೆಯರಿಗೆ ಸಂಗೀತ ಪಾಠ ಕಲಿಸಲು ಅಗ್ರಹಾರದ ಬ್ರಾಹ್ಮಣರು ಹಾಗೂ ಇನ್ನಿತರ ಮೇಲ್ವರ್ಗದವರು ವಿರೋಧಿಸುವುದು. ದಲಿತರ ಚೆನ್ನಿ ಕರ್ನಾಟಕ ಸಂಗೀತದಲ್ಲಿ ಪರಿಣಿತಿಯನ್ನು ಪಡೆದು ಗಾನ ಶಾರದೆಯಾಗಿ, ದಲಿತೋದ್ಧಾರ ಮಾಡಲು ವಿವಿಧ ಸಂಗೀತ ಕಚೇರಿಗಳನ್ನು ನಡೆಸುವುದು. ಅದರಿಂದ ಬರುವ ಹಣದಿಂದ ಕಸ್ತೂರಿ ಬಾ ಟ್ರಸ್ಟ್‌ಗೆ ದೇಣಿಗೆಯಾಗಿ ನೀಡುವುದು. ಆ ಮೂಲಕ ದಲಿತರಿಗೆ ದೇವಾಲಯ ಪ್ರವೇಶ ಮಾಡಿಸುವುದು ಈ ಕಾದಂಬರಿಯ ಕಥಾ ವಸ್ತುವಾಗಿದೆ.

*Please cite this article as:* ಉಮೇಶ್, ಎಂ.ಆರ್. (2026). ಹೇಮಾವತಿ ಕಾದಂಬರಿ: ದಲಿತರ ದೇಗುಲ ಪ್ರವೇಶ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(1). ಪು.ಸಂ.* 35–48

ಕಾದಂಬರಿಯಲ್ಲಿನ ಪ್ರಧಾನ ಪಾತ್ರಗಳೆಂದರೆ ಶ್ರೀನಿವಾಸ ಪೆರುಮಾಳ್, ರಾಮಣ್ಣ ಪೆರುಮಾಳ, ಆನಂದ ಪೆರುಮಾಳ್, ರಂಗನಾಯಕಿ (ರಾಮಣ್ಣ ಪೆರುಮಾಳರ ಎರಡನೇ ಹೆಂಡತಿ) ಈಳಿಗೆಮಣೆ, ಹೇಮಾವತಿ, ರಂಗಸ್ವಾಮಿ, ಸುಬ್ಬಾಭಟ್ಟರು, ವಾಸು, ಸಾಹುಕಾರ ಶತಾರಿಯವರು, ಸೀತಮ್ಮ, ಸುಂದರ, ರಾಮಕೃಷ್ಣ ಮತ್ತು ದೇವಕಿಪ್ರಿಯ, ಕಾಳ (ದಲಿತ ಹಾಗೂ ಪೆರುಮಾಳರ ಮನೆಯ ಆಳು) ಚೆನ್ನಿ (ಕಾಳನ ಮಗಳು/ಗಾನ ಶಾರದೆ) ಮುಂತಾದವುಗಳು.

ಪೆರುಮಾಳರ ಊರು ಕಾವೇರಿ ಅಗ್ರಹಾರ. ಅದೇ ಊರಿನಲ್ಲಿ ಪೆರುಮಾಳರ ಮನೆತನದವರು ಸುಮಾರು ಹದಿನೈದು ತಲೆಮಾರುಗಳಿಂದ ವಾಸವಾಗಿರುವರು. ಶ್ರೀನಿವಾಸ ಪೆರುಮಾಳರಿಗೆ ವಂಶಪಾರಂಪರ್ಯವಾಗಿ ಬಂದ ಒಂದು ಎಕರೆ ತೋಟ, ಎರಡು ಎಕರೆ ಗದ್ದೆ, ಸ್ವಲ್ಪ ಹೊಲ ಕಾವೇರಿ ಅಗ್ರಹಾರದಲ್ಲಿದ್ದವು. ಅಗ್ರಹಾರದ ಸಾಹುಕಾರರಾದ ಶತಾರಿ ಅವರಿಗೆ ಶ್ರೀನಿವಾಸ ಪೆರುಮಾಳರ ಫಲವತ್ತಾದ ತೋಟದ ಮೇಲೆ ಕಣ್ಣು ಬೀಳುವುದು. ಸಾಹುಕಾರ ಶತಾರಿಯವರಿಗೆ ಕಾವೇರಿ ಅಗ್ರಹಾರದ ಸುತ್ತ ಎಲ್ಲಿ ಒಳ್ಳೆಯ ಜಮೀನನ್ನು ಕಂಡರೂ ಅದನ್ನು ಕಬಳಿಸುವ ದುರಾಸೆ ಆಸೆಯಾಗುತ್ತಿತ್ತು. ಸಮಾಜದಲ್ಲಿ ಪ್ರಬಲರು, ಬುದ್ಧಿವಂತರಾಗಿದ್ದರಿಂದ ಬಲವಂತವಾಗಿಯಾದರು ಅಥವಾ ದೌರ್ಜನ್ಯದಿಂದ ಆದರೂ ಫಲವತ್ತಾದ ಜಮೀನುಗಳನ್ನು ಅವರು ಕಿತ್ತುಕೊಂಡಿದ್ದ ಉದಾಹರಣೆಗಳು ಸಾಕಷ್ಟಿವೆ. ಸಹಜವಾಗಿಯೇ ಶ್ರೀನಿವಾಸ ಪೆರುಮಾಳರ ಸಂಪದ್ಭರಿತ ತೋಟದ ಮೇಲೆ ಕಣ್ಣು ಬಿದ್ದಿತು. ಶತಾರಿಯವರು ಶ್ರೀನಿವಾಸ ಪೆರುಮಾಳರ ಮನೆಗೆ ಬಂದಾಗ, ಪೆರುಮಾಳರು ತೋಟದಲ್ಲಿದ್ದಾರೆಂದು ತಿಳಿದು ತೋಟಕ್ಕೆ ಬಂದರು. ತೋಟದಲ್ಲಿ ತಾವೇ ದುಡಿಮೆ ಮಾಡಿಕೊಂಡು ಅದರ ಜೊತೆಗೆ ಬೇಸರವನ್ನು ಕಳೆಯಲು ಹಾಡನ್ನು ಹಾಡುತ್ತಾ ಕೆಲಸ ಮಾಡುವುದನ್ನು ನೋಡಿದರು. ಶ್ರೀನಿವಾಸ ಪೆರುಮಾಳರು ಸಾಹುಕಾರನ್ನು ನೋಡಿ ಹಾಡು ಹೇಳುವುದನ್ನು ನಿಲ್ಲಿಸಿ, ಸಾಹುಕಾರರನ್ನು ಸ್ವಾಗತಿಸಿದರು. ಸಾಹುಕಾರ ಶತಾರಿಯವರು ಸ್ವಲ್ಪ ಸಂಕೋಚದಿಂದಲೇ ಬಂದ ವಿಷಯವನ್ನು ಪ್ರಸ್ತಾಪಿಸಿದರು. ನಿಮ್ಮ ತೋಟ ನನ್ನ ತೋಟದ ಪಕ್ಕದಲ್ಲಿದೆ ನಾಲ್ಕು ಮೂಲೆಯ ಚೌಕಟ್ಟು ಸರಿಯಾಗಿಲ್ಲ ಹಾಗಾಗಿ ನಿಮ್ಮ ತೋಟವನ್ನು ನಮಗೆ ಬಿಟ್ಟುಕೊಡಬೇಕು. ಕಾಸನ್ನು ಕೋಡುವೆನೆಂದು ಹೇಳಿದರು. ಇದನ್ನು ಕೇಳಿದ ಪೆರುಮಾಳರಿಗೆ ಬಹಳ ದುಃಖ ಹಾಗೂ ಸ್ವಲ್ಪ ಕೋಪವು ಬಂದಿತು. ಆವಾಗ ಅವರು ಗಂಭೀರವಾಗಿ "ಈ ತೋಟ ನಮ್ಮ ವಂಶಪಾರಂಪರ್ಯವಾಗಿ ಬಂದ ಆಸ್ತಿ. ನಾವು ದುಡಿದು ಊಟ ಮಾಡಬೇಕೆಂಬುದನ್ನು ಕಲಿಸಿದ ಗುರು ಇದು. ನಮ್ಮ ತಾಯಿಯೂ ಹೌದು; ಮಗನೂ ಹೌದು. ಇದು ಇರುವವರೆಗೆ ನಾವು ಯಾರ ಹಂಗಿಗೂ ಒಳಗಾಗಬೇಕಾದುದಿಲ್ಲ. ಆಶ್ರಯವನ್ನೂ ಬಯಸಬೇಕಾದುದಿಲ್ಲ. ಈ ಲೋಕದಲ್ಲಿರುವ ಜಮೀನುಗಳೆಲ್ಲಾ ನಿಮ್ಮದೆಯೆ. ಎಲ್ಲೆಲ್ಲೂ ಹಾಳುಗಂದಾಯ; ಆಯ್ದುಕೊಂಡು ತಿನ್ನುವ ಕೋಳಿಯ ಕಾಲು ಮುರಿದಂತೆ ಬಡಪಾಯಿಯಾದ ನನ್ನ ಮೇಲೆ ಯಾಕೆ ನಿಮ್ಮ ಕಣ್ಣು? ನನಗೆ ಇರುವ ಜಮೀನು ನಾನೇ ಗೆದ್ದು ಪಾಕಮಾಡಿ ಕೆಲಸ ಮಾಡುವಷ್ಟಿದೆ. ನಿಮಗಿರುವ ಜಮೀನಿನಲ್ಲಿ ಸಾವಿರ ಆಳು ದುಡಿದರು ಪೂರೈಸುವುದಿಲ್ಲ. ಇದನ್ನು ನಾನು ಕೊಡುವುದಿಲ್ಲ." (ಹೇಮಾವತಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಐ.ಬಿ.ಎಸ್ ಪ್ರಕಾಶನ, ಬೆಂಗಳೂರು, 2016 ಪುಟ 08) ಎಂದು ನೇರವಾದ ನುಡಿಗಳ ಮೂಲಕವಾಗಿ ಹೇಳಿದರು. ನನಗೆ ಈ ತೋಟವೇ ತಂದೆ ತಾಯಿ ಹಾಗೂ ಸರ್ವಸ್ವಃ ಆಗಿದೆ. ಈ

ಅಗ್ರಹಾರದ ಸುತ್ತಮುತ್ತಲಿನಲ್ಲಿರುವಂತಹ ಜಮೀನುಗಳೆಲ್ಲಾವು ನಿಮ್ಮದೇ ಆಗಿವೆ. ನಿಮಗೆ ನನ್ನಂತ ಬಡಪಾಯಿ ಆಸ್ತಿ ಮೇಲೆ ಏಕೆ ನಿಮ್ಮ ಕಣ್ಣು? ಎಂದರು. ಕೊನೆಗೆ ಸಾಹುಕಾರರು ನಾಲ್ಕು ಸಾವಿರ ರೂಪಾಯಿ ತೆಗೆದುಕೊಂಡು ತೋಟ ಕೊಡಿ ಎಂದರು. ಅವರ ಈ ಮಾತಿನಿಂದ ಪೆರುಮಾಳರಿಗೆ ಜಿಗುಪ್ಸೆಯಾಗಿ, ಅವರು "ಸ್ವಾಮಿ ಸಾಹುಕಾರರೇ ಈಗ ಒಂದು ಘಳಿಗೆಯಲ್ಲಿ ನನ್ನ ವಿದ್ಯೆಕ್ಕೆ ತಿಂಗಳಿಗೆ ಸಾವಿರ ರೂಪಾಯಿ ಮರ್ಯಾದೆ ಬರುವುದೆಂದು ಹೇಳಿದ್ದಿರಿ. ಆದರೆ ಈಗ ನನ್ನ ವಿದ್ಯೆಗೆ ಮೂರು ಕಾಸೂ ಬೆಲೆಯಿಲ್ಲವೆನ್ನುತ್ತಿರಿ ನನಗೆ ಸಹಾಯ ಮಾಡುವವರು ಈ ಊರಿನಲ್ಲಿ ಯಾರು ಇಲ್ಲವೆನ್ನುತ್ತಿರಿ. ಹಾಗಾದರೆ ಪರೀಕ್ಷೆ ಮಾಡಿ ನೋಡೋಣವೆ" ಎಂದರು. (ಹೇಮಾವತಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಐ.ಬಿ.ಎಸ್ ಪ್ರಕಾಶನ, ಬೆಂಗಳೂರು, 2016 ಪುಟ 09) ನಾಡಿದ್ದು ನಿಮ್ಮ ಮನೆಯ ಮುಂದೆ ನಿಮ್ಮ ಹಾಡುಗಾರಿಕೆ ಇದೆ. ನನ್ನ ಮನೆ ಮುಂದೆ ಬಂದವರಿಗೆಲ್ಲಾ ಪ್ರತಿ ತಲೆಗೆ ಒಂದು ರೂಪಾಯಿ ನಾಣ್ಯವನ್ನು ಕೊಡುತ್ತೇನೆಂದರು. ಮರು ದಿವಸ ಸಾಹುಕಾರರು ಎಲ್ಲೆಡೆಯೂ ಡಂಗುರವನ್ನು ಸಾರಿಸಿದರು. ಸಾರಿದ ಮರು ದಿನವೇ ಸಾಹುಕಾರರ ಮನೆಯ ಮುಂದೆ ಸುತ್ತಲಿನ ಐವತ್ತು ಹಳ್ಳಿಗಳಿಂದ ಸಾವಿರಾರು ಜನರು ಬಂದು ಸೇರಿದರು. ಆದರೆ ಶ್ರೀನಿವಾಸ ಪೆರುಮಾಳರ ಮನೆಗೆ ಯಾರು ಬರುವುದಿಲ್ಲ. ಕೊನೆಯಾದಾಗಿ ನಾನೇ ಹೋಗಿ ಸಾಹುಕಾರರ ಮನೆಯಲ್ಲಿ ಒಂದು ರೂಪಾಯಿ ಗಿಟ್ಟಿಸಿಕೊಂಡು ಬರುತ್ತೇನೆಂದು ಹೊರಟು ಹೋಗುವರು.

ಆದರೆ ಸಾಹುಕಾರರ ಮನೆಯ ಮುಂದೆ ಅನೇಕ ಜನಜಂಗುಳಿ ಸೇರಿರುತ್ತದೆ. ಸಾಹುಕಾರರಿಗೆ ಅವರ ಮನೆಯ ಮುಂದೆ ಸೇರಿರುವ ಜನರಿಗೆ ಹಂಚುವುದಕ್ಕೆ ಹಣ ಇರುವುದಿಲ್ಲ. ಇದನ್ನು ಕಂಡ ಜಿಲ್ಲಾಧಿಕಾರಿಗಳು ಅಲ್ಲಿ ಸೇರಿರುವ ಜನರನ್ನು ಕುರಿತು ನೀವು ನಿಮ್ಮ ಮನೆಗಳಿಗೆ ಹೋಗಿ ಎಂದು ಹೇಳಿದರು. ಆದರೆ ಜನಸ್ತೋಮ ಸಾಹುಕಾರರು ಹಣ ನೀಡುವವರೆಗೆ ನಾವು ಇಲ್ಲಿಂದ ಹೋಗುವುದಿಲ್ಲ ಎಂದರು. ಕೊನೆಗೆ ಜಿಲ್ಲಾಧಿಕಾರಿಗಳು ಪೆರುಮಾಳರೇ ನೀವು ಇಲ್ಲಿ ಹಾಡಿ ನಿಮ್ಮ ಗಾಯನದ ಶಕ್ತಿ ತೋರಿಸಬೇಕೆಂದು ಕೇಳಿಕೊಂಡರು. ಆವಾಗ ಪೆರುಮಾಳರು ಹಾಡಿದಾಗ ಎಲ್ಲರೂ ತಮ್ಮನ್ನು ತಾವು ಮೈಮರೆತರು. ಕೊನೆಗೆ ಬಂದ ಜನಸಾಗರವನ್ನು ಸಮಾಧಾನದಿಂದ ಮನೆಗೆ ಕಳುಹಿಸಿದರು. ಈ ಘಟನೆಯು ಮಹಾರಾಜರಿಗೆ ತಿಳಿದಾಗ ಸಾಹುಕಾರ ಶಠಾರಿಯವರು ಹದಿನಾರು ಎಕರೆ ತೋಟವನ್ನು ಶ್ರೀನಿವಾಸ ಪೆರುಮಾಳರಿಗೆ ದಾನವಾಗಿ ನೀಡುವರು.

ಶ್ರೀನಿವಾಸ ಪೆರಿಮಾಳರು ನಿಧನವಾದ ಬಳಿಕ ಅವರ ಮೊಮ್ಮಕ್ಕಳಾದ ರಾಮಣ್ಣ ಪೆರುಮಾಳರು ಮತ್ತು ಆನಂದ ಪೆರುಮಾಳರು ಅವರ ತಾತನಂತೆಯೇ ಸಂಗೀತಶಾಸ್ತ್ರದಲ್ಲಿ ನಿಪುಣತೆಯನ್ನು ಸಾಧಿಸಿದ್ದರು. ರಾಮಣ್ಣ ಪೆರುಮಾಳರ ಊರಾದ ಅಗ್ರಹಾರ ಕಾವೇರಿ ನದಿ ತೀರದ ಫಲವತ್ತಾದ ಗ್ರಾಮವಾಗಿತ್ತು. ಅಲ್ಲಿ ಸುಮಾರು ಇನ್ನೂರು ಮನೆಗಳಿದ್ದವು. ನಲವತ್ತು ಬ್ರಾಹ್ಮಣರ ಮನೆಗಳು, ನೂರು ಒಕ್ಕಲಿಗರ ಮನೆಗಳು ಇದ್ದವು. ಊರಿನ ಪಕ್ಕದಲ್ಲಿಯೇ ದೊಡ್ಡ ಹೊಲೆಗೇರಿಯಿತ್ತು. ಅಗ್ರಹಾರದ ಜನರೆಲ್ಲಾರು ವ್ಯವಸಾಯ ಅವಲಂಬಿತರಾಗಿದ್ದರು. ಒಕ್ಕಲಿಗರು, ಹೊಲೆಯರು ಕಷ್ಟದ ಕೆಲಸಗಳನ್ನು ಮಾಡಬೇಕಾಗಿತ್ತು. ಏಕೆಂದರೆ ಹೊಲೆಯರಿಗೆ ಸ್ವಂತ ಜಮೀನುಗಳು ಇರಲಿಲ್ಲ. ಆದ್ದರಿಂದ ಅಲ್ಲಿನ ದಲಿತರು ಮೇಲ್ವರ್ಗದವರ ಜಮೀನಿನಲ್ಲಿ ಕೂಲಿ ಮತ್ತು ಜೀತದಿಂದಲೇ ಜೀವನ ನಡೆಸುತ್ತಿದ್ದರು.

ರಾಮಣ್ಣ ಪೆರುಮಾಳರದು ಅಗ್ರಹಾರದಲ್ಲಿ ಮರ್ಯಾದೆಯಿಂದ ಬದುಕಿ ಬಾಳಿದ ಮನೆತನ. ರಾಮಣ್ಣ ಪೆರುಮಾಳರ ಮೊದಲನೇ ಹೆಂಡತಿ ಲಕ್ಷ್ಮೀ ಪ್ಲೇಗ್‌ನಿಂದ ಮರಣ ಹೊಂದುವಳು. ಆವಾಗ ಎರಡು ವರ್ಷದ ಹೇಮಾವತಿ ಎಂಬ ಹೆಣ್ಣು ಮಗಳನ್ನು ಆರೈಕೆ ಮಾಡುವುದು ರಾಮಣ್ಣ ಪೆರುಮಾಳರ ಹೆಗಲಿಗೆ ಬೀಳುವುದು. ಬಂಧುಮಿತ್ರರ ಒತ್ತಾಯದ ಹೇಮಾವತಿಯ ಯೋಗ ಕ್ಷೇಮ ವಿಚಾರಿಸಲು ರಂಗನಾಯಕಿಯೊಂದಿಗೆ ಎರಡನೇ ಮದುವೆ ಆಗುವರು. ರಾಮಣ್ಣ ಪೆರುಮಾಳರ ತಮ್ಮನಾದ ಆನಂದನ ಒಂದು ರೀತಿಯ ಭಿನ್ನ ಸ್ವಭಾವದವನಾಗಿದ್ದನು. ಅವನು ಮನೆಯ ಯಾವುದೇ ಜವಾಬ್ದಾರಿಗಳನ್ನು ಹೊತ್ತುಕೊಳ್ಳುತ್ತಿರಲಿಲ್ಲ. ಆದರೆ ಸಂಗೀತ ಶಾಸ್ತ್ರದಲ್ಲಿ ಅವರ ತಾತ ಶ್ರೀನಿವಾಸ ಪೆರುಮಾಳರನ್ನು ಮೀರಿಸುವಂತಹ ಶಕ್ತಿ ಅವನಲ್ಲಿತ್ತು. ಹಾಗಾಗಿ ಹಾಡುಗಳನ್ನು ಹಾಡಿಕೊಂಡೇ ಲೋಕಸಂಚಾರ ಮಾಡುತ್ತಿರುವನು. ಹೀಗೆ ಅಗ್ರಹಾರದ ನರಸಿಂಹ ದೇವಸ್ಥಾನದ ಪಕ್ಕದ ಹೊಳೆಯ ದಂಡೆಯ ಹತ್ತಿರದ ಕಲ್ಲಿನ ಮಂಟಪದ ಬಳಿ ಊರಿನ ಮೇಲ್ವರ್ಗದ ಹೆಣ್ಣು ಮಕ್ಕಳಿಗೆ ಉಚಿತವಾಗಿ ಸಂಗೀತ ಅಭ್ಯಾಸ ಮಾಡಿಸುತ್ತಿದ್ದನು. ಆದರೆ ಅಲ್ಲಿ ಬರುವಂತಹ ವಿದ್ಯಾರ್ಥಿಗಳಲ್ಲಿ ಸಂಗೀತ ಕಲಿಯುವಂತಹ ಆಸಕ್ತಿ, ಶ್ರದ್ಧೆಯನ್ನು ಯಾರ ಹತ್ತಿರ ಕಾಣುತ್ತಿರಲಿಲ್ಲ. ಅಲ್ಲೇ ದೂರದಲ್ಲಿ ಹೊಲೆಯರ ಚೆನ್ನಿಯು ಕುಕ್ಕೆಯಲ್ಲಿ ಸಗಣಿಯನ್ನು ಬಾಚಿ ಸ್ವಚ್ಛ ಮಾಡುತ್ತಿರುವಾಗ ಆನಂದನು ವಿದ್ಯಾರ್ಥಿಗಳಿಗೆ ಹೇಳಿಕೊಟ್ಟ ಹಾಡುಗಳನ್ನು ಕೇಳಿಸಿಕೊಳ್ಳುವಳು. ಒಬ್ಬಳೇ ಇರುವಾಗ ಹಾಡುತ್ತಿದ್ದಳು. ಹೀಗೆ ಒಬ್ಬಳೇ ಹಾಡುವುದು ಅವಳಿಗೆ ಅಭ್ಯಾಸವಾಗಿತು. ಆನಂದನ ಹತ್ತಿರ ಸಂಗೀತ ಕಲಿಯುವ ಮೇಲ್ವರ್ಗದ ಮಕ್ಕಳಿಗಿಂತ ಸೊಗಸಾಗಿ ಹಾಡುತ್ತಿದ್ದಳು.

ಒಮ್ಮೆ ಅಪರೂಪಕ್ಕೆ ತೋಟಕ್ಕೆ ಹೋಗಿದ್ದ ಆನಂದ. ಕಾಳನು ಕೆಲಸ ಮಾಡುತ್ತಿರುವ ಮಾವಿನ ಮರದ ಕೆಳಗೆ ಅವನ ಮಗಳು ಚೆನ್ನಿ ಕಿರುದನಿಯಲ್ಲಿ ಮೆಲ್ಲಗೆ ಹಾಡುತ್ತಿದ್ದಳು. ಚೆನ್ನಿ ಹೇಳುವ ಹಾಡು ಆನಂದನು ದೇವಸ್ಥಾನದಲ್ಲಿ ಸಂಗೀತದ ಹುಡುಗಿಯರಿಗೆ ಹೇಳಿಕೊಡುತ್ತಿದ್ದ ಹಾಡು. ಅವಳ ಶುಶ್ರಾವ ಕಂಠವನ್ನು ಕೇಳಿದ ಆನಂದನಿಗೆ ಬಹಳ ಸಂತೋಷವಾಯಿತು. ಚೆನ್ನಿ ಎದುರಿಗೆ ಬಂದು ಕುಳಿತುಕೊಂಡನು. ಆವಾಗ **"**ಸೂಜಿಗಲ್ಲು ಸೂಜಿಯನ್ನು ಆಕರ್ಷಿಸುವಂತೆ ಚೆನ್ನಿಯ ಕಂಠ ಅವನನ್ನು ಆಕರ್ಷಿಸಿತು. ನಾನು ಅಷ್ಟು ದಿನಗಳಿಂದ ಹುಡುಕುತ್ತಿದ್ದ ಕಂಠ ಇಲ್ಲಿದೆ**"** (ಹೇಮಾವತಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಐ.ಬಿ.ಎಸ್ ಪ್ರಕಾಶನ, ಬೆಂಗಳೂರು, 2016 ಪುಟ26) ಎಂಬ ಸಂಭ್ರಮ ಅವನಿಗೆ ಆಯಿತು. ಚೆನ್ನಿಯ ಹತ್ತಿರ ಬಂದು ನಿನಗೆ ನಾನು ಹಾಡುಗಳನ್ನು ಹೇಳಿಕೊಡುತ್ತೇನೆ ಎಂದನು. ಚೆನ್ನಿ ಆನಂದನಿಂದ ಸ್ವಲ್ಪ ದೂರ ಕುಳಿತುಕೊಳ್ಳುವಳು. ಕೊನಗೆ ಆನಂದ ಚೆನ್ನಿಗೆ ಸಂಗೀತವನ್ನು ಹೇಳಿಕೊಡುವೆ ಎಂದು ಹೇಳಿದನು. ಆಗ ಅವಳು ಸ್ವಲ್ಪ ಸಂಕೋಚದಿಂದಲೇ ಒಪ್ಪಿಕೊಂಡಳು.

ಆನಂದನು ಹಾಡು ಹೇಳಿಕೊಡಲು ಪ್ರಾರಂಭಮಾಡುವನು. ಆನಂದನ ಹತ್ತಿರ ಚೆನ್ನಿ ಕುಳಿತಿರುವುದನ್ನು ಕಂಡು ಕಾಳನಿಗೆ ಆಶ್ಚರ್ಯವಾಗಿ. **"**ಹಾಳು ಮೂಳೇ ಏನು ತಿಳಿದು ದಣಿಗಳ ಸಮಕ್ಕೆ ಕುಳಿತಿದೆ ಎಂದು ಕಾಳ ಸರ್ರನೆ ಆನಂದನ ಹತ್ತಿರಕ್ಕೆ ಬಂದನು**"**. (ಹೇಮಾವತಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಐ.ಬಿ.ಎಸ್ ಪ್ರಕಾಶನ, ಬೆಂಗಳೂರು, 2016 ಪುಟ26) ಆದರೆ ಅವರಿಬ್ಬರೂ ಹಾಡಿನಲ್ಲಿ ಮೈಮರೆತ್ತಿದ್ದರು. ಸ್ವಲ್ಪ ಸಮಯದ ನಂತರ ಚೆನ್ನಿಯನ್ನು ಹಿಂದಕ್ಕೆ ಕುಳಿತುಕೋ ಎಂದು ಗದರಿಸಿದನು. ಆಗ ಆನಂದ ಸಿಡುಕಬೇಡ.

ಈ ಊರಿನಲ್ಲಿ ನಾನು ನಮ್ಮ ಕುಲದ ಅನೇಕ ಹೆಣ್ಣು ಮಕ್ಕಳಿಗೆ ಸಂಗೀತ ಹೇಳಿಕೊಟ್ಟಿರುವೆ. ಆದರೆ ಇವಳ ಕಂಠದಂತಹ ಕೋಮಲ ಕಂಠ ಇದುವರೆಗೂ ನಾ ಕಾಣೆ. ಸಂಗೀತ ದೇವತೆಯೇ ಈಕೆಯ ಕೊರಳನಲ್ಲಿ ನೆಲಸಿರುವಳು. 'ಕೆಸರಿನಲ್ಲಿ ಕಮಲ' ಎನ್ನುವ ಹಾಗೆ ಇವಳ ಶಾರೀರ ಇದೆ. ಸಮಾಜದಲ್ಲಿ ಅತ್ಯಂತ ತಿರಸ್ಕೃತವಾದ ಜನರ ಸಮಾಜವನ್ನು ಬೆಳಗುವವಳು ಹುಟ್ಟಿದ್ದಾಳೆ ಎಂದು ಭವಿಷ್ಯ ನುಡಿಯುವನು. ಇದೆಲ್ಲಾ ಭಗವಂತನ ಲೀಲೆ ಎಂದನು. ಆವಾಗ ಕಾಳ "ಅಯ್ಯೋ ಬುದ್ಧಿ ಗೊಬ್ಬರ ಹೊರೋ ಮುಕ್ಕಿ ಹೊಲೆ ಮಕ್ಕಳ ನಮಗೆ ಹಾಡು ಯಾಕೆ? ಈ ಹುಡಿಗಿಗೇನೋ ಹಾಡು ಪ್ರಾಣ. ನೀವು ನಿಮ್ಮ ಹುಡುಗೀರ್ಗಿಗೆ ಹೇಳಿ ಕೊಡೋ ಹಾಡನ್ನೆಲ್ಲಾ ಇದು ನಿತ್ತಾ ಹಗಲು ರಾತ್ರಿ ಹಾಡ್ತದೆ. ಆದರೆ ನಮಗೆ ಯಾಕೆ ಹಾಡು? ಹೇಳಿ ಕೋಡೋರು ಯಾರು? ಎಂದಾಗ ಆನಂದನು ಏ ಕಾಳ, ನೀನು ಯೋಚಿಸಬೇಡ. ಇವಳಿಗೆ ನಾನು ಹೇಳಿ ಕೊಡುತ್ತೇನೆ. ನಮ್ಮ ಹುಡುಗೀಯರಿಗೆ ಹೇಳಿಕೊಡುವುದಕ್ಕಿಂತ ಚೆನ್ನಾಗಿ ಹೇಳಿಕೊಡುತ್ತೇನೆ. ಇವಳಂತಹ ಸಂಗೀತಗಾರಳು ಈ ಲೋಕದಲ್ಲಿಯೇ ಇಲ್ಲವೆಂಬಂತೆ ಮಾಡುತ್ತೇನೆ ಎಂದನು. ಕಾಳನು ಅಪನಂಬಿಕೆಯಿಂದ ತಲೆಯಲ್ಲಾಡಿಸುತ್ತ ಸರಿ ಬುದ್ದಿ, ಆದರೆ ಇವಳಿಗೆ ಹೇಳಿಕೊಡೊಕೆ ನಿಮ್ಮವರು ನಿಮ್ಮನ್ನ ಸುಮ್ಮನೇ ಬಿಡ್ತಾರ್ಯೆ ಎಂದನು. ಆನಂದ ಸುಮ್ಮನೆ ಬಿಡದೇ ನನ್ನೇನು ಕಟ್ಟಿಹಾಕುತ್ತಾರೆಯೇ? ಸಂಗೀತ ಯಾರ ಮನೆಯ ಆಸ್ತಿಯೂ ಅಲ್ಲ. ಇದು ದೇವರ ಕೊಟ್ಟ ವಿದ್ಯೆ. ದೇವರು ಕೊಟ್ಟ ವರ. ಇವಳಿಗೆ ಇದನ್ನು ಕಲಿಸದಿದ್ದರೆ ನನ್ನ ವಿದ್ಯೆ ವ್ಯರ್ಥ" (ಹೇಮಾವತಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಐ.ಬಿ.ಎಸ್ ಪ್ರಕಾಶನ, ಬೆಂಗಳೂರು, 2016 ಪುಟ 26–27) ಎಂದು ಆನಂದ ಸಂಗೀತಕ್ಕೆ ಜಾತಿ ಇಲ್ಲ. ವಿದ್ಯೆ ಯಾರಪ್ಪನ ಸೊತ್ತು ಅಲ್ಲ. ಇದು ಕಲಿತವನ ಮತ್ತು ಕಲಿಯುವವನ ಪಾಲು ಎಂದು ಹೇಳುವನು.

ಆನಂದನು ಹೊಲೆಯರ ಚೆನ್ನಿಗೆ ಹಾಡನ್ನು ಕಲಿಸಿಕೊಡುತ್ತಾನೆಂದು ತಿಳಿದ ಅಗ್ರಹಾರದ ಬ್ರಾಹ್ಮಣ, ಒಕ್ಕಲಿಗ, ವೈಶ್ಯ, ವೀರಶೈವ, ಹಾಗೂ ಮುಸ್ಲಿಂರಿಗೂ ಆಶ್ಚರ್ಯವಾಯಿತು. ಅಲ್ಲದೇ ಊರಿನ ಎಲ್ಲಾ ಜನಾಂಗದವರ ಕೋಪಕ್ಕೆ ಪಾತ್ರನಾಗುವನು. ಊರಿನವರ ಕೋಪಕ್ಕೆ ಹೆದರದೇ, ಆನಂದ ಚೆನ್ನಿಗೆ ಸಂಗೀತಭ್ಯಾಸವನ್ನು ಮುಂದುವರಿಸುವನು. ಇದರಿಂದ ಕುಪಿತರಾದ ಅಗ್ರಾಹಾರ ಜನರು ಹೊಲೆಯರಿಗೆ ನೀಡಿದ ಸಾಲ, ಸಾಗುವಳಿ ಜಮೀನನ್ನು ಹಿಂಪಡೆಯುವರು. ಹೊಲೆಯರು ಎಲ್ಲಿ ಕಾಣುತ್ತಾರೋ ಅಲ್ಲಿಯೇ ಅವರನ್ನು ಸುಖಾಸುಮ್ಮನೆ ಗದರಿಸುವುದು, ಹೊಡೆಯುವುದು, ಬಡಿಯುವುದನ್ನು ಪ್ರಾರಂಭ ಮಾಡುವರು. ಒಂದು ದಿನ ರಾತ್ರಿ ಕಾಳನ ಗುಡಿಸಿಲಿಗೆ ಬೆಂಕಿ ಹಚ್ಚುವರು. ಮರು ದಿನ ರಾಮಣ್ಣ ಪೆರುಮಾಳರ ತೋಟದಲ್ಲಿ ಬಾಳೆಗಿಡಗಳನ್ನು ಕತ್ತರಿಸಿ ಹಾಕುವರು. ಅಗ್ರಹಾರದಲ್ಲಿ ಉತ್ತಮರೆನಿಸಿಕೊಂಡಿರುವ ಜನಾಂಗದವರು ಹೊಲೆಯರನ್ನು ಬಗ್ಗುಬಡಿಯುತ್ತೇವೆ ಎಂದು ಹೇಳಿಕೊಂಡು ತಿರುಗುತ್ತಿದ್ದರು.

ಹೀಗೆ ಒಂದು ದಿನ ಸಂಜೆ ಸಮಯದಲ್ಲಿ ನದಿಯ ತೀರದಲ್ಲಿ ಆನಂದನು ಕುಳಿತುಕೊಂಡು ಯಾವುದೋ ಹಾಡನ್ನು ಹೇಳುತ್ತಿರುವಾಗ ಊರಿನ ಹೊಲೆಯರೆಲ್ಲರು ಬರುವರು. ಆಗ ಕಾಳನು ಕಣ್ಣಿನಲ್ಲಿ ನೀರು ಸುರಿಸುತ್ತಾ ಇನ್ನು ಮುಂದೆ ನನ್ನ ಮಗಳಿಗೆ ನೀವು ಸಂಗೀತ ಪಾಠವನ್ನು ಹೇಳಿಕೊಡಬೇಡಿರಿ ಎಂದನು. ಅದಕ್ಕೆ ಆನಂದ "ನೀವು ಹೆದರಬೇಡಿ, ಅವರು ಏನೇನು ಮಾಡುತ್ತಾರೋ ನೋಡೋಣ" (ಹೇಮಾವತಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಐ.ಬಿ.ಎಸ್ ಪ್ರಕಾಶನ, ಬೆಂಗಳೂರು, 2016 ಪುಟ ಸಂಖ್ಯೆ 35)

ಎಂದು ಧೈರ್ಯದ ಉತ್ತರವನ್ನು ನೀಡಿದನು. ಆದರೆ ಕಾಳನ ಜತೆಯಲ್ಲಿ ಬಂದಿದ್ದ ಹೊಲೆಯರೂ "ಅದಾಗೋಕಿಲ್ಲ ಬುದ್ಧಿ. ನಿಮಗೇನೂ ಮಾಡೋಕೆ ಅವರ ಕೈಲಿ ಆಗೋಕಿಲ್ಲ ಆದರೆ ನಮ್ಮ ಪ್ರಾಣ ತಗೀತಾರೆ. ಕಂಡ ಕಂಡಡೆ ನಮ್ಮನ್ನ ಹೊಡೆಯೋಕೆ ಬತ್ತಾರೆ ದನಗಳ ಮಾಳದಲ್ಲಿ ಅವರ ಹುಡ್ಲು ನಮ್ಮ ಹುಡ್ಲನ್ನೆಲ್ಲಾ ಚಚ್ಚತಾರೆ. ನನ್ನ ಮನೆ ಸುಟ್ಟರು. ಇವತ್ತು ನಾಳೆ ಇನ್ನೂ ಮನೆಗಳನ್ನ ಸುಡ್ತಾರಂತೆ. ನಿಮ್ಮ ಕಾಲ್ಗೆ ಬೀಳ್ತೀವಿ ನೀವು ನಮ್ಮ ತಂಟೆ ಬರಬೇಡಿ. ನಮ್ಮನ್ನ ನಮ್ಮ ಪಾಡಿಗೆ ನೀವು ಬಿಟ್ಟರೆ ಸಾಕು." (ಹೇಮಾವತಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಐ.ಬಿ.ಎಸ್ ಪ್ರಕಾಶನ, ಬೆಂಗಳೂರು, 2016 ಪುಟ ಸಂಖ್ಯೆ 35) ಎಂಬ ಅಸಾಹಾಯಕವಾದ ಧ್ವನಿಯ ಮೂಲಕ ತಮ್ಮ ಉತ್ತರವನ್ನು ನೀಡಿದರು. ಆವಾಗ ಆನಂದ ಮೇಲ್ವರ್ಗದವರು ತಮ್ಮ ಕೋಪವನ್ನೆಲ್ಲಾ ಅವರು ಹೊಲೆಯರ ಮೇಲೆ ತೀರಿಸಿಕೊಳ್ಳುವುದರ ಕುರಿತಾಗಿ ತುಂಬಾನೇ ದುಃಖವಾಗಿತು. ಈ ಘಟನೆಯಾದ ನಂತರ ಆನಂದ ಚೆನ್ನಿಯನ್ನು ಒಡಿಸಿಕೊಂಡು ಹೋಗಿದ್ದಾನೆಂಬ ಸುದ್ಧಿಯನ್ನು ಊರಿನ ಮೇಲ್ವರ್ಗದವರು ಹಬ್ಬಿಸಿದ್ದರು.

ಇತ್ತ ಎರಡನೇ ಮದುವೆಯಾದ ಪೆರುಮಾಳರ ಜೀವನ ಚಿತ್ರಣವೇ ಬದಲಾಗುತ್ತಾ ಹೋಯಿತು. ಪೆರುಮಾಳರ ಮನೆಯಲ್ಲಿ ಪ್ರತಿದಿನ ಹತ್ತರಿಂದ ಹದಿನೈದು ಜನಕ್ಕೆ ಊಟವನ್ನು ಹಾಕುತ್ತಿದ್ದರು. ರಂಗನಾಯಕಿ ಮತ್ತು ಅವಳ ಅಕ್ಕ ಈಳಿಗೆಮಣಿಯ ಬೇಜವಬ್ದಾರಿಯಿಂದ ಹಂತ ಹಂತವಾಗಿ ನಿಂತು ಹೋದಾಂತಾಯಿತು. ತೋಟದ ಆಳು ಕಾಳನಿಗೂ ಕೂಡ ಇದು ತಪ್ಪಿದ್ದಲ್ಲ. ವಾರದ ಪ್ರತಿ ಶನಿವಾರವೂ ಪೆರುಮಾಳರ ಮನೆಯಲ್ಲಿ ಭಜನೆ ಕಾರ್ಯಕ್ರಮವೂ ನಡೆಯುತ್ತಿತ್ತು. ಇದನ್ನೂ ನಿಲ್ಲಿಸುವುದಕ್ಕೆ ರಂಗನಾಯಕಿ ಪ್ರಸ್ತಾಪಿಸಿದಾಗ ಪೆರುಮಾಳರು ನಾನು ದೇಶಾಂತರ ಹೋಗುತ್ತೇನೆಂದು ಹೇಳಿದಾಗ ಸುಮ್ಮನಾಗುವುದು. ಒಟ್ಟಿನಲ್ಲಿ ಪೆರುಮಾಳರ ಜೀವನ ಮೊದಲ ಹೆಂಡತಿ ಲಕ್ಷ್ಮಿಯನ್ನು ಕಳೆದುಕೊಂಡ ನಂತರ ನಾವಿಕನಿಲ್ಲದ ದೋಣಿಯಂತಾಗಿತ್ತು. ಹೀಗಿರುವಾಗ ಮಗಳಾದ ಹೇಮಾವತಿಗೆ ಮದುವೆ ಮಾಡಿ ಅವಳನ್ನು ಉತ್ತಮ ಕುಟುಂಬಕ್ಕೆ ಕಳುಹಿಸಿಕೊಂಡಬೇಕೆಂದು ತೀರ್ಮಾನಿಸಿದರು. ಅವರು ವರನನ್ನು ಹುಡುಕುತ್ತಿದ್ದಾಗ ಅವರಿಗೆ ಸುಬ್ಬಾಭಟ್ಟರ ಸಹಾಯದಿಂದ ಎರಡನೇ ಶಠಾರಿಯವರ ಮಗ ಸುಂದರನನ್ನು ಹುಡುಕಿದರು. ಇವನು ಹಾಸನ ಹೈಸ್ಕೂಲಿನಲ್ಲಿ ಎರಡನೆಯ ವರುಷ ಎಸ್.ಎಸ್.ಎಲ್.ಸಿ ಪರೀಕ್ಷೆ ಫೇಲಾಗಿದ್ದ. ಆದರೆ ಊರಿನಲ್ಲಿ ಅವನು ಪಾಸ್ ಆಯಿತೆಂದು ಸುಳ್ಳು ಹೇಳಿಕೊಂಡು ಬೆಂಗಳೂರಿಗೆ ಹೋಗಿ ಇಂಟರ್ ಮೀಡಿಯೇಟ್ ಸೇರಿಕೊಂಡಿರುವೆ ಎಂದು ಪತ್ರ ಬರೆದನು. ಸುಂದರನು ಬೆಂಗಳೂರಿನಲ್ಲಿ ಪೋಲಿ ಸ್ನೇಹಿತರೊಂದಿಗೆ ಸೇರಿ ಸಿನಿಮಾ, ಸಿಗರೇಟ್ ಮುಂತಾದ ದುರಾಭ್ಯಾಸಗಳನ್ನು ಬೆಳೆಸಿಕೊಂಡಿದ್ದನು. ತನ್ನ ಹುಟ್ಟೂರಿಗೆ ಬಂದವನೇ ವ್ಯವಸಾಯ ಮಾಡಲು ಪ್ರಾರಂಭ ಮಾಡುವನು. ಅಲ್ಲಿನೂ ಹಣವನ್ನು ನಷ್ಟ ಮಾಡಿಕೊಳ್ಳುವನು. ಇದರಿಂದ ಬೇಸತ್ತ ಶಠಾರಿಯವರ ಕುಟುಂಬವು ಬೆಂಗಳೂರಿನ ಬಸವನಗುಡಿಯಲ್ಲಿ ಬಾಡಿಗೆ ಮನೆಯೊಂದನ್ನು ಹಿಡಿದು ಜೀವನ ನೆಡೆಸುವುದು. ಇತ್ತ ಹೇಮಾವತಿಗೆ ಸುಂದರವಾದ ವರ ಸುಂದರನೆ ಎಂದು ತೀರ್ಮಾನಿಸಿ ಅವನನ್ನು ಮದುವೆಗೆ ಒಪ್ಪಿಸುವುದು. ಕೊನೆಗೆ ಸುಂದರನ ತಾಯಿ ಸೀತಮ್ಮನವರು ನಮ್ಮ ಪೂರ್ವಿಕರ ಆಸ್ತಿ, ಮರಳಿ ನಮಗೆ ಈ ಮದುವೆಯಿಂದ ಆದರೂ ಸೇರುತ್ತದೆಂದು ಷಡ್ಯಂತ್ರ ಮಾಡಿ ಹೇಮಾವತಿಯನ್ನು ಸುಂದರನಿಗೆ ಮದುವೆ ಮಾಡಿಕೊಳ್ಳುತ್ತಾರೆ.

ಮದುವೆಯಾಗಿ ಎರಡು ಮೂರು ತಿಂಗಳಾದ ನಂತರ ಹೇಮಾವತಿಯು ಬೆಂಗಳೂರಿನ ತನ್ನ ಗಂಡನ ಮನೆಗೆ ಹೋಗುವಳು. ಆದರೆ ಸುಂದರನು ಹೆಂಡತಿಯನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿರಲಿಲ್ಲ. ಮನೆಗೆ ಯಾವಾಗಲಾದರೂ ಒಮ್ಮೆ ಬಂದು ಹೋಗುವನು. ನಗರದಲ್ಲಿರುವ ಅವನ ಗೆಳಯರೊಂದಿಗೆ ಸೇರಿ ಬೇರೆ ಬೇರೆ ರೀತಿಯಾದ ಬಿಜನೆಸ್‌ಗಳನ್ನು ಮಾಡಿ ನಷ್ಟವನ್ನು ಅನುಭವಿಸಿದನು. ಅದೇ ಸಮಯದಲ್ಲಿ ಜಗತ್ತಿನ ಎರಡನೆಯ ಮಹಾಯುದ್ದ ಪ್ರಾರಂಭವಾಗುವುದು. ಮೈಗಳ್ಳರು, ಕಳ್ಳರು, ದಡ್ಡರು, ಕ್ರೂರಿಗಳು, ಸಮಾಜದ ಅನ್ಯಾಯಕ್ಕೆ ಸಿಕ್ಕಿದ್ದರು ಮೋಸಗಾರರು, ಅಪ್ರಯೋಜಕರು, ಹೇಡಿಗಳು ಸೈನ್ಯಕ್ಕೆ ಸೇರಿಕೊಂಡರು. ಇದರಿಂದ ಪ್ರಚೋದನೆಗೊಂಡ ಸುಂದರನೂ ಸೈನ್ಯಕ್ಕೆ ಸೇರಿದನು.

ಹೇಮಾವತಿಯ ವಿವಾಹದ ನಂತರ ಪೆರುಮಾಳರ ಮನೆಯ ಚಿತ್ರಣ ಬದಲಾಯಿತು. ಪೆರುಮಾಳರ ಮನೆಯ ಕಾರ್ಯಕ್ರಮಗಳಲ್ಲಿ ಪ್ರಮುಖವಾದದ್ದು ತಿಂಗಳ ಮೊದಲ ಶನಿವಾರ ಭಜನೆ ಕಾರ್ಯ್ಕ್ರಮ. ಭಜನೆಯ ದಿವಸ ಪೆರುಮಾಳರ ಮನೆಯಲ್ಲಿ ಪ್ರಸಾದ ವಿತರಣೆ ಮಾಡುತ್ತಿದ್ದರು. ಹಾಗಾಗಿ ಊರಿನ ಜನರೆಲ್ಲಾರು ಭಜನೆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು. ಹೇಮಾವತಿ ಗಂಡನ ಮನೆಗೆ ಹೋದಮೇಲೆ ಭಜನೆಗೆ ಪೂರ್ವ ತಯಾರು ಮಾಡುವರಿಲ್ಲದೆ ಆ ಕಾರ್ಯಕ್ರಮ ಕ್ರಮೇಣ ನಿಂತುಹೋಯಿತು.

ಹೀಗೆ ಕಾದಂಬರಿಯ ಮಧ್ಯಭಾಗದಲ್ಲಿ ರಾಮಣ್ಣ ಪೆರುಮಾಳರು, ರಾಮಕೃಷ್ಣ ಮತ್ತು ದೇವಕಿಪ್ರಿಯ ನದಿಯಲ್ಲಿ ಸ್ನಾನವಾದ ಬಳಿಕ ದಡದ ಮೇಲೆ ರಾಮಕೃಷ್ಣ ಮೈಗೆ ನಾಮವನ್ನು ಬಳಿದುಕೊಳ್ಳುತ್ತಿರುವಾಗ ದಲಿತ ಜವರನ ಎತ್ತು ನದಿಯಲ್ಲಿ ಈಜಿಕೊಂಡು ತನ್ನ ಬಾಲವನ್ನು ತಿರುಗಿಸಿದಾಗ ಆಕಸ್ಮಿಕವಾಗಿ ಬಾಲದಲ್ಲಿದ್ದ ನೀರಿನ ಒಂದು ಅಂಶ ರಾಮಕೃಷ್ಣ, ದೇವಕಿಪ್ರಿಯ ಮತ್ತು ಪೆರುಮಾಳರ ಮೇಲೆಯು ಸಿಂಚನವಾಗುತ್ತದೆ. ಇದ್ದರಿಂದ ಕುಪಿತಗೊಂಡ ರಾಮಕೃಷ್ಣನು ಜವರನನ್ನು ಮನೋಯಿಚ್ಚೆ ಬೈದು ಅಲ್ಲೇ ಬಿದ್ದಿದ ಕಲ್ಲಿನಿಂದ ಹೊಡೆದನು. ಅದು ನೇರವಾಗಿ ಜವರನ ಹಣೆಗೆ ಬೀಳುವುದು. ಗಾಯಗೊಂಡ ಜವರನ ಹಣೆ ರಕ್ತಸಿಕ್ತವಾಗಿ ಹಣೆಯಿಂದ ರಕ್ತಸುರಿದು ಪ್ರಜ್ಞೆ ತಪ್ಪಿ ಕೆಳಗೆಬಿಳುತ್ತಾನೆ. ಇದನ್ನು ಕಂಡ ರಾಮಣ್ಣ ಪೆರುಮಾಳರು ಜವರನ ಹತ್ತಿರ ಬಂದು ಗುರುಗಳ ಪಾದುಕೆ ಮುದ್ರೆಯಿರುವ ವಸ್ತ್ರದಿಂದ ರಕ್ತವನ್ನು ಒರೆಸಿ ಹಣೆಯ ಮೇಲೆ ಬಟ್ಟೆಯನ್ನು ಇಡುವರು. ಇದರಿಂದ ಕುಪಿತಗೊಂಡು ರಾಮಕೃಷ್ಣ ದೇವಸ್ಥಾನದ ಆರ್ಚಕರಲ್ಲಿ ನಡೆದ ವಿಚಾರವನ್ನು ಮತ್ತು ಗುರುಗಳ ಪಾದುಕೆಯನ್ನು ಹೊಲೆಯರಿಗೆ ಮುಟ್ಟಿಸಿದ್ದರಿಂದ ಅನಾಚಾರವಾಯಿತೆಂದು ಎಲ್ಲಾ ಆರ್ಚಕರು ಸೇರಿ ದೇವಸ್ಥಾನದ ಒಳಗೆ ಪೆರುಮಾಳರು ಬರುವುದನ್ನು ತಡೆಯುವರು. ಆ ದಿನ ಶ್ರೀರಾಮನವಮಿ ದಿವಸವಾಗಿದ್ದರಿಂದ ರಾಮಾಯಣ ಪಠಣ ಮಾಡುವುದು ಪೆರುಮಾಳಾರಾಗಿದ್ದರೂ ಅವರಿಗೆ ಪಠಣ ಮಾಡುವ ಅವಕಾಶವನ್ನು ಕೊಡದೆ ದೇವಸ್ಥಾನದಿಂದ ಹೊರಗಡೆ ದಬ್ಬುವರು. ಈ ಘಟನೆಯಿಂದ ಮನನೊಂದ ಪೆರುಮಾಳರು ಕಣ್ಣೀರು ಹಾಕುತ್ತ ಮನೆಯ ಪಡಸಾಲೆಯಲ್ಲಿ ಮುಖದ ಮೇಲೆ ಬಟ್ಟೆಯನ್ನು ಹೊದ್ದುಕೊಂಡು ಅಳತ್ತಾ ಕೂರುವರು. ಇದೆಲ್ಲವನ್ನು ಕಾಳನು ಸೂಕ್ಷ್ಮವಾಗಿ ಗಮನಿಸಿ ಹೊಲೆಯರನ್ನು ಒಂದುಗೂಡಿಸಿದನು. ಕ್ಷಣಾರ್ಧದಲ್ಲಿ ಪೆರುಮಾಳರ ಮನೆಯ ಮುಂದೆ ದೊಡ್ಡದಾಗಿ ಚಪ್ಪರವನ್ನು ಹಾಕಿ ಹಣ್ಣು ಹಂಪಲಗಳನ್ನು ತಂದು ರಾಮಾಯಣ ಪಠಾಣಮಾಡಲು ಏರ್ಪಾಡು ಮಾಡುವನು. ಇದನ್ನು ನೋಡಿದ ಪೆರುಮಾಳರು ತುಂಬಾ ಸಂತೋಷಗೊಂಡು ಶ್ರೀರಾಮನ ಪಟವನ್ನು

ಇರಿಸಿ ರಾಮಾಯಣ ಪಠಣದಲ್ಲಿ ತಲ್ಲೀನರಾಗಿರುವರು. ಪಠಣ ಮುಗಿದ ಮೇಲೆ ರಸಾಯನ ಮಾಡುವುದನ್ನು ರಂಗನಾಯಕಿ ವಿರೋಧಿಸಿದಾಗ ಎಲ್ಲಾರು ಸೇರಿ ರಸಾಯನವನ್ನು ಮಾಡುವರು. ಪ್ರಸಾದವನ್ನು ಹಂಚುತ್ತಿರುವಾಗ ಅಲ್ಲೇ ಇದ್ದ ವೈದಿಕ ಸಂಪ್ರದಾಯವಾದಿಗಳು ಕಲ್ಲುಗಳನ್ನು ತೂರುವರು. ಇದ್ದರಿಂದ ಕುಪಿತಗೊಂಡ ಹೊಲೆಯರು ಪ್ರತಿದಾಳಿ ಮಾಡಲು ಮುಂದಾದರು. ಆಗ ಪೆರುಮಾಳರು ಬೇಡ ನೀವು ಮೇಲ್ವರ್ಗದವರ ಮೇಲೆ ದಾಳಿ ಮಾಡಬೇಡಿ, ಅವರು ಎರಡು ಏಟುಗಳನ್ನು ಕೊಟ್ಟು ಸುಮ್ಮಾನಾಗುತ್ತಾರೆ ಅಷ್ಟೇ ಎನ್ನುವರು. ಆಗ ಅಲ್ಲಿ ನೆರೆದಿದ್ದ ಹೊಲೆಯರು ಸುಮ್ಮಾನಾಗುವರು. ಈ ಘಟನೆಯಿಂದ ಮನನೊಂದ ಪೆರುಮಾಳರು ಆದಿನ ರಾತ್ರಿ ಯಾರಿಗೂ ಹೇಳದೆ ಕಣ್ಮರೆಯಾಗುತ್ತಾರೆ. ಇದೇ ಕೊರಗಿನಲ್ಲಿ ಮನೆಯ ಆಳಾದ ಕಾಳನು ವಿಷಮಶೀತ ಜ್ವರದಿಂದ ಸಾವನ್ನಪ್ಪುವನು. ಇತ್ತ ಮನೆಯನ್ನು ಭಟ್ಟರಿಗೆ ಬರೆದುಕೊಂಡಿದ್ದರಿಂದ ಮನೆಯನ್ನು ಖಾಲಿಮಾಡಿ ರಂಗನಾಯಕಿ ಶ್ರೀರಂಗಪಟ್ಟಣದ ಅವರ ಸಂಬಂಧಿಕರ ಮನೆ ಕಡೆ ಹೊರಡುವಳು. ಇದೇ ಸಮಯದಲ್ಲಿ ಬೆಂಗಳೂರಿನಲ್ಲಿದ್ದ ಹೇಮಾವತಿಯು ಗಂಡ ಸೈನ್ಯದಿಂದ ಬರುಬಹುದೆಂಬ ನಿರೀಕ್ಷೆಯಲ್ಲಿದ್ದಳು. ಆದರೆ ಹೇಮಾವತಿಯ ನಿರೀಕ್ಷೆ ಸುಳ್ಳಾಯಿತು. ಗಂಡ ಬರಲೇ ಇಲ್ಲ. ದಿನ ಕಳೆದ ಹಾಗೆ ಹೇಮಾವತಿಗೆ ಪಟ್ಟಣದ ಜೀವನ ನಿರ್ವಹಣೆ ತುಂಬಾ ಕಷ್ಟಕರವಾಯಿತು. ಹಾಗಾಗಿ ಹುಟ್ಟೂರಿನ ಕಡೆಗೆ ಬರುವುದಕ್ಕೆ ತೀರ್ಮಾನಿಸುವಳು. ಮನೆಗೆ ಬಂದಾಗ ಮನೆಗೆ ಬೀಗ ಹಾಕಿರುವುದನ್ನು ಕಂಡು ತುಂಬಾ ದುಃಖವಾಗುವುದು. ಅಕ್ಕ ಪಕ್ಕದವರ ಮೂಲಕ ಈ ಮನೆಯನ್ನು ನನ್ನ ಹೆಸರಿಗೆ ಮಾಡಿಲ್ಲ ಎಂಬುವುದೂ ತಿಳಿಯುವುದು. ಹಾಗಾಗಿ ಬೇರೆ ಎಲ್ಲಿಯಾದರೂ ಹೋಗಬೇಕೆಂದು ನಿರ್ಧರಿಸುವಳು. ಇತ್ತ ಹೇಮಾವತಿಯ ತಂದೆ ಬೆಂಗಳೂರು, ಮದ್ರಾಸ್ ಹಾಗೂ ರಾಮೇಶ್ವರಂ ಮುಂತಾದ ಊರುಗಳನ್ನು ಅಲೆಯುವುದಕ್ಕೆ ಪ್ರಾರಂಭಿಸುವರು.

ಹೇಮಾವತಿಗೆ ಗಂಡ ಬಿಟ್ಟ ಒಬ್ಬಂಟಿ ಹೆಂಗಸು ಸಮಾಜದಲ್ಲಿ ಜೀವನ ಮಾಡುವುದು ತುಂಬ ಕಷ್ಟ. ಸಮಾಜ ನನ್ನ ನೋಡುವ ದೃಷ್ಟಿಯೇ ಬೇರೆಯಾಗಿರುತ್ತದೆ. ರಾಮಕೃಷ್ಣ ಎನ್ನುವಂಥವರ ಕಾಮುಕ ಕಣ್ಣು ಅವಳ ಮೇಲೆ ಬೀಳುವುದು. ಹಾಗಾಗಿ ಆತ್ಮಹತ್ಯೆ ಮಾಡಿಕೊಳ್ಳುವ ತೀರ್ಮಾನಕ್ಕೆ ಬರುವಳು. ಆತ್ಮಹತ್ಯೆ ಮಾಡಿಕೊಳ್ಳಲು ರೈಲ್ವೆ ಸ್ಟೇಷನ್ಗೆ ಬಂದು ತನ್ನ ಜೀವನದಲ್ಲಿ ಆದ ಆಗಾದವಾದ ನೋವಿನಿಂದ ತಲ್ಲೀನವಾಗುವಳು. ಮದ್ರಾಸ್‌ನಿಂದ ರೈಲೊಂದು ಬಂದ ನಂತರ ಖಾದಿದಾರಿಯೊಬ್ಬರು ತುಂಬಾ ತೇಜಸ್ಸು ಹೊಂದಿರುವ ಗಡ್ಡಾದಾರಿಯೊಬ್ಬರು ಹೇಮಾವತಿಯನ್ನು ನೋಡುವನು. ಅವರು ಹೇಮಾವತಿಯನ್ನು ನೋಡಿದ ಕೂಡಲೇ ಹತ್ತಿರ ಬಂದು ಹೇಮಾವತಿ ಎಂದು ಕರೆಯುವನು. ಆ ಶರೀರವಾಣಿ ಗುರುತಿಸಿ ಆನಂದ ಚಿಕ್ಕಪ್ಪ ಎಂದು ಗೋಳೋ ಅಳುವಳು. ಅಲ್ಲಿಂದ ನೇರವಾಗಿ ಇಬ್ಬರೂ ಕೂಡ ಮದ್ರಾಸ್‌ಗೆ ಹೋಗುವರು.

ಮದ್ರಾಸ್‌ನಲ್ಲಿ ಅವಳ ಚಿಕ್ಕಪ್ಪ ಭವ್ಯವಾದ ಬಂಗಲೆಯನ್ನು ಕೊಂಡುಕೊಂಡಿರುವನು. ಹೇಮಾವತಿಯನ್ನು ಮನೆಗೆ ಕರೆದುಕೊಂಡು ಬಂದು ಶಾರದೆ (ಚೆನ್ನಿ) ಯಾರು? ಬಂದಿದ್ದಾರೆ ನೋಡು ಎಂದನು. ಆಗ ಗುರೂಜಿ ಎಂದು ಚೆನ್ನಿ ಬರುತ್ತಾಳೆ. ನಂತರ ಚಿಕ್ಕಪ್ಪ ನಡೆಸುತ್ತಿರುವ ಪ್ರಿಂಟಿಂಗ್ ಪ್ರೆಸ್‌ಗೆ ಹೋಗುವಳು. ಅಲ್ಲಿ ಹೇಮಾವತಿಗೆ 'ಉದ್ಧಾರ' ವೆಂಬ ಪತ್ರಿಕೆ ಪ್ರಕಟವಾಗುವುದು ಕಣ್ಣಿಗೆ ಬೀಳುವುದು. ಈ ಪತ್ರಿಕೆ ವಾರ ಪತ್ರಿಕೆ

ಆಗಿರುವುದು. ಪತ್ರಿಕೆಯಲ್ಲಿ ಗಾಂಧೀತತ್ವದ ಪ್ರತಿಪಾದನೆಯ ವಿಚಾರ, ಖಾದಿ, ಗ್ರಾಮೋದ್ಯೋಗ, ಹರಿಜನೋದ್ಧಾರ ಮತ್ತು ಪಾನನಿಷೇಧಗಳನ್ನು ಕುರಿತು ಪ್ರಕಟವಾಗುತ್ತಿರುವುದು. ಉದ್ಧಾರ ಪತ್ರಿಕೆಯ ಲೇಖನಗಳು ತಮ್ಮ ಪ್ರಭಾವದಿಂದ ಕನ್ನಡ ನಾಡಿನಲ್ಲೆಲ್ಲಾ ಪ್ರಸಿದ್ಧಿಯನ್ನು ಪಡೆದುಕೊಂಡಿರುತ್ತದೆ.

ಅಭಿನವ ಶಾರದೆಯಾದ ಚೆನ್ನಿ ಹೇಮಾವತಿಗೆ ತನ್ನ ಜೀವನದ ವೃತ್ತಾಂತವೆನೆಲ್ಲಾ ಅಂದರೆ ಅಗ್ರಹಾರದ ಜೀವನಕ್ಕೂ ಹಾಗೂ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿಯೂ ನೈಪುಣ್ಯತೆಯನ್ನು ಸಾಧಿಸಲು ನಡೆಸಿದ ಜೀವನ ಹೋರಾಟವನ್ನು ಗುರುಗಳಾದ ಆನಂದರ ತ್ಯಾಗವನ್ನು ಹೇಮಾವತಿಗೆ ಎಳೆ–ಎಳೆಯಾಗಿ ಬಿಚ್ಚಿಡುತ್ತಾಳೆ. ಆನಂದರ ಮನೆಯಲ್ಲಿ ಅಡುಗೆಯನ್ನು ಮಾಡುವವಳು ಮತ್ತು ಊಟ ಬಡಿಸುವವಳು ಶಾರದೆಯಾಗಿರುವಳು. ಮೊದಮೊದಲು ಆನಂದನಿಗೆ ಊಟ ಬಡಿಸಲು ಹಿಂಜರಿಯುತ್ತಿದ್ದಳು. ಬದಲಾದ ದಿನಗಳಲ್ಲಿ ಶಾರದೆ ಆನಂದರ ಉದಾರವಾದ ಗುಣಗಳಿಂದ ತನ್ನಲ್ಲಿರುವ ಕೀಳಿರಿಮೆಯನ್ನು ಹೋಗಲಾಡಿಸಿಕೊಂಡಳು. ಆಮೇಲೆ ಎಲ್ಲರೂ ಜೊತೆಯಲ್ಲಿ ಆನಂದನ ಪಕ್ಕದಲ್ಲಿಯೇ ಊಟ ಮಾಡುವಷ್ಟರ ಮಟ್ಟಿಗೆ ಬದಲಾಗಿರುವಳು. ನಾಲ್ಕು ವರ್ಷ ಕಳೆಯುವುದರೊಳಗಾಗಿ ಚೆನ್ನಿಯಲ್ಲಿರುವ ನಿಜವಾದ ವ್ಯಕ್ತಿತ್ವ ಪಕ್ವವಾಗುವ ರೀತಿಯಲ್ಲಿ ಅವಳ ಪ್ರತಿಭೆ ಪ್ರಜ್ವಲಿಸತೊಡಗುತ್ತದೆ. ಇವಳಿಗೆ ಗುರುಗಳಾದ ಆನಂದ ಕನ್ನಡ, ಇಂಗ್ಲೀಷ್, ತಮಿಳು ಮತ್ತು ಹಿಂದಿ ಭಾಷೆಗಳಲ್ಲಿ ಪಾಂಡಿತ್ಯವನ್ನು ಪಡೆದುಕೊಳ್ಳಲು ಉಪಾಧ್ಯಾಯರನ್ನು ನೇಮಕ ಮಾಡಿದ್ದನು.

ಆನಂದನು ಗಾಂಧೀಜಿಯ ಸಂಪರ್ಕದಲ್ಲಿ ಇದ್ದನು. ಹರಿಜನರ ಉದ್ಧಾರ ಅವನ ಪ್ರಮುಖ ಧ್ಯೇಯವಾಗಿರುವುದು. ಚೆನ್ನಿಯೂ ಪ್ರಮುಖ ನಗರಗಳಲ್ಲಿ ಸಂಗೀತ ಕಚೇರಿಗಳನ್ನು ನಡೆಸಿ ಆದರಿಂದ ಬಂದ ಹಣದಿಂದ ಹರಿಜನೋದ್ಧಾರಕ್ಕೆ ದೇಣಿಗೆಯಾಗಿ ಲಕ್ಷಗಟ್ಟಲೇ ಹಣವನ್ನು ನೀಡುತ್ತಿದ್ದಳು. ಆಕೆ ಕಸ್ತೂರಿ ಬಾ ಅವರನ್ನು ತುಂಬಾ ಹಚ್ಚಿಕೊಂಡಿದ್ದಳು. ಒಂದು ದಿನ ಶಾರದೆಗೆ ಬಾ ಅವರ ಅವರ ಮರಣವಾದ ಸುದ್ದಿ ಕೇಳಿ ತುಂಬಾ ದುಃಖಿತಳಾಗುವಳು. ಕಸ್ತೂರಿ ಬಾ ಅವರ ಪ್ರಮುಖ ಧ್ಯೇಯವಾಗಿದ್ದ ಹರಿಜನ ಉದ್ಧಾರ ಮಾಡಬೇಕೆಂಬ ಸಂಕಲ್ಪವನ್ನು ಹೊಂದುವಳು. ಮುಂದಿನ ದಿನಗಳಲ್ಲಿ ಬೆಂಗಳೂರು, ಮೈಸೂರು ಮುಂತಾದ ಪ್ರಮುಖ ನಗರಗಳಲ್ಲಿ ಶಾರದೆ ಗಾನ ಕಛೇರಿಗಳನ್ನು ನಡೆಸಿ, ಬಂದ ಹಣವನ್ನು ದೇಣಿಗೆಯಾಗಿ ನೀಡುತ್ತಿರುವಳು.

ಹೀಗೆ ಬೆಂಗಳೂರಿನ ಕಾರ್ಯಕ್ರಮವೊಂದರಲ್ಲಿ ಸುಬ್ಬಾಭಟ್ಟರ ಮಗ ವಾಸು ದೇಣಿಗೆಯ ಹಣವನ್ನು ನೀಡಲು ಬಂದಿದ್ದನು. ಅಲ್ಲಿ ಅವನಿಗೆ ಗಾನ ಶಾರದೆ ಜೊತೆಗೆಯಿರುವ ಹೇಮಾವತಿಯನ್ನು ನೋಡಿ ತುಂಬಾ ಸಂತೋಷವಾಯಿತು. ಗಾನ ಶಾರದೆಯನ್ನು ಪರಿಚಯ ಮಾಡಿಕೊಳ್ಳುವುದು ಮಾತನಾಡಿಸುವುದು ತುಂಬಾ ಸುಲಭ ಎಂದು ಮನಸ್ಸಿನಲ್ಲಿ ಅಂದುಕೊಂಡನು. ಹೀಗೆ ಎರಡು ಮೂರು ದಿನ ಬರುವುದು ಹೋಗುವುದು ಮಾಡುವನು. ಶಾರದೆಯನ್ನು ಮಾತನಾಡಿಸುವುದು ಅವನ ಉದ್ದೇಶ. ಆದೇ ಸಮಯದಲ್ಲಿ ಆನಂದರಿಗೆ ಗಾಂಧೀಜಿಯವರಿಂದ ಪತ್ರವೊಂದು ಬರುವುದು. ಆ ಪತ್ರದಲ್ಲಿ ನೀವುಗಳೇ ಸ್ವತಃ ಹಳ್ಳಿಗಳಿಗೆ ಹೋಗಿ ಹರಿಜನರ ಸೇವೆಯನ್ನು ಮಾಡಬೇಕೆಂದು ಬರೆದಿರುವುದು. ಈ ವಿಚಾರವನ್ನು ಓದಿದ ಕೂಡಲೇ ಆನಂದ ಹಾಗೂ ಅವರ ಬಳಗದವರು ದಲಿತರ ಸೇವೆಗಾಗಿ ಹಳ್ಳಿಯ ಕಡೆ ಮುಖಮಾಡುವರು. ಗಾಂಧೀಜಿಯ

ಆಜ್ಞೆಯ ಪ್ರಕಾರವಾಗಿ ಹಳ್ಳಿಯ ಸ್ವಂತ ಊರಾದ ಅಗ್ರಹಾರದ ಕಡೆಗೆ ಹೊರಡಲು ಸಿದ್ಧವಾಗುವರು. ಅವರೊಟ್ಟಿಗೆ ವಾಸು ಕೂಡ ಅಗ್ರಹಾರಕ್ಕೆ ಬರುವನು.

ಅಗ್ರಹಾರಕ್ಕೆ ರಾಮಣ್ಣ ಪೆರುಮಾಳರ ತಮ್ಮ ಆನಂದ ಬಂದಿರುವುದು ಊರಿನವರಿಗೆಲ್ಲಾ ತಿಳಿಯುವುದು. ಇವನ ಜೊತೆಗೆ ಗಾನ ಶಾರದೆ (ಚೆನ್ನಿ) ಜೊತೆಗೆ ಬಂದಿರುವುದು ಅಗ್ರಹಾರದವರಿಗೆ ತಿಳಿದಾಗ ಊರಿನ ಜನರೆಲ್ಲಾ ಸಾಲುಗಟ್ಟಿ ನಿಲ್ಲುವರು. ಶಾರದೆಯ ಹತ್ತಿರ ದೈನೇಸಿ ಭಾವದಿಂದ ಕೇಳಿಕೊಂಡು, ಬನ್ನಿ ಹೋಗೋಣ ದೇವಸ್ಥಾನಕ್ಕೆ ಎಂದು ಕರೆಯುವರು. ಆದರೆ ಸುಬ್ಬಾಭಟ್ಟರು ಬುದ್ಧಿ ತುಂಬಾ ಚುರುಕಾಗಿದ್ದರಿಂದ ಗಾನ ಶಾರದೆಯ ನಿಜವಾದ ಮೂಲವನ್ನು ಅವರು ಕಂಡು ಹಿಡಿಯುವರು. ಇಲ್ಲಿ ವಾಸು, ಹೇಮಾವತಿ, ಆನಂದನು ಮತ್ತು ಗಾನಶಾರದೆಯ ಕೈಯಿಂದ ಕೊಟ್ಟ ಕಾಫಿಯನ್ನು ಕುಡಿಯುತ್ತಿದ್ದನ್ನು ನೋಡಿದನು. ವಾಸು ಗಾನಶಾರದೆಯು ಹತ್ತಿರವಾಗುವುದನ್ನು ನೋಡಿ ಮನಸ್ಸಿಗೆ ಬೇಸರವನ್ನು ಮಾಡಿಕೊಂಡರು. ಮೊದಲೇ ಸಂಪ್ರದಾಯವಾದಿಯಾಗಿದ್ದ ಸುಬ್ಬಾಭಟ್ಟರು ಗಾನಶಾರದೆಯ ಮೂಲ, ಮತ್ತು ಅವಳು ಯಾವ ಕುಲದವಳು ಮತ್ತು ಅವಳ ಮನೆತನದ ಬಗ್ಗೆ ಹೇಳಿದರು. ಆದರೂ ವಾಸು ನಾನು ಅವಳನ್ನೇ ಮದುವೆಯಾಗುತ್ತೇನೆಂದು ಹಠಹಿಡಿಯುವನು. ಇದರಿಂದ ತಲೆಗೆ ಹುಚ್ಚು ಹಿಡಿದ್ದಂತಾಗಿ ಅವರಿಗೆ ಇದ್ದಕ್ಕಿದ್ದ ಹಾಗೆ ಅನರೋಗ್ಯ ಉಂಟಾಗಿ ಹಾಸಿಗೆ ಹಿಡಿಯುವರು.

ನಂತರದ ದಿನಗಳಲ್ಲಿ ಅಗ್ರಹಾರದಲ್ಲಿಯೇ ಹರಿಜನೋದ್ಧಾರಕ್ಕಾಗಿ ವಾಲ್ಮೀಕಿ ಕುಟೀರವನ್ನು ಸ್ಥಾಪನೆ ಮಾಡಿ ಅಲ್ಲಿ ಹರಿಜನರಿಗೆ ಸೇವೆಯನ್ನು ಮಾಡಲು ಮುಂದಾಗುವರು. ಈ ಕುಟೀರದ ಮೂಲಕ ಹರಿಜನರಿಗೆ ಅಕ್ಷರಾಭ್ಯಾಸ, ವೈದ್ಯಕೀಯಸೇವೆ, ಅನ್ನಸಂತರ್ಪಣೆ ಮತ್ತು ಭಜನೆ ಮುಂತಾದ ಕಾರ್ಯಕ್ರಮವನ್ನು ನಡೆಸುವಂತಹ ಕಾರ್ಯಕ್ರಮವಾಗಿರುವುದು. ಈ ಸಂದರ್ಭದಲ್ಲಿ ವಾಸು ಹರಿಜನರ ದೇಗುಲವನ್ನು ಪ್ರವೇಶ ಮಾಡಿಸಬೇಕೆಂದು ಮನಸ್ಸು ಮಾಡುವನು. ಹರಿಜನ ಕೇರಿಯ ಮುಂಭಾಗ ಸಣ್ಣ ಗುಡ್ಡದ ತಳದಲ್ಲಿ ಒಂದು ತರಗಿನ ಮನೆಯನ್ನು ಕಟ್ಟಲು ಫ್ರಾರಂಭಿಸಿದರು. ಒಟ್ಟಿನಲ್ಲಿ ವಾಸುವಿಗೆ ಜೀವನದಲ್ಲಿದ್ದು ಎರಡೇ ಗುರಿ. ಮೊದಲನೆಯದು ಹರಿಜನರ ಸೇವೆ. ಎರಡನೆಯದು ಗಾನಶಾರದೆಯ ಜೊತೆಗೆ ವಿವಾಹವಾಗುವುದು.

ವಾಲ್ಮೀಕಿ ಕುಟೀರವು 'ಹೊಲೆಯರ ಸಂಘ' ಎಂದೇ ಅಗ್ರಹಾರದ ಬ್ರಾಹ್ಮಣರು ತಿಳಿದಿದ್ದರು. ಒಳ್ಳೆಯ ಕೆಲಸ ಎಲ್ಲೇ ನಡೆದರೂ ಅದರ ಪ್ರಭಾವ ಸುತ್ತಲೂ ಬೆಳೆಯುತ್ತದೆ ಎಂಬುದಕ್ಕೆ ವಾಲ್ಮೀಕಿ ಕುಟೀರವೇ ಸಾಕ್ಷಿಯಾಗುತ್ತದೆ. ಕೊನೆಯ ಗಳಿಗೆಯಲ್ಲಿ ವಾಸು ತಮ್ಮ ತಂದೆ ಸುಬ್ಬಾಭಟ್ಟರನ್ನು ಈ ವಿವಾಹಕ್ಕೆ ಒಪ್ಪಿಸಬೇಕೆಂದು ಪ್ರಯತ್ನಿಸಿದನು. ಆದರೆ ಸಂಪ್ರದಾಯವಾದಿಗಳಾಗಿದ್ದ ಅವರು ಈ ವಿವಾಹಕ್ಕೆ ಒಪ್ಪಿಗೆ ನೀಡಲಿಲ್ಲ. ತಂದೆಯನ್ನು ಎದರು ಹಾಕಿಕೊಂಡು ಕೊನಗೆ ಗಾನಶಾರದೆ ಮತ್ತು ವಾಸುವಿನ ವಿವಾಹ ನೆರೆವೇರಿತು. ಈ ಮದುವೆಯಲ್ಲಿ ಸ್ವತಃ ಗಾಂಧೀಜಿಯವರೇ ಆಗಮಿಸಿ ಗಾನಶಾರದೆಯನ್ನು ವಾಸುವಿಗೆ ಧಾರೆಯೆರುವರು. ಈ ಕನ್ಯೆಯನ್ನು ನಾನು ನಿನಗೆ ಕೊಡುವುದು ಧರ್ಮ ರಕ್ಷಣೆಗಾಗಿ ಮತ್ತು ನೀನು ಆಕೆಯ ರಕ್ಷಣೆ ಮಾಡುವುದಕ್ಕಾಗಿ ಎಂದರು. ವಿವಾಹದ ಮೊದಲ ರಾತ್ರಿ ವಧೂ ವರರ ಉಪವಾಸ. ನೂಲುವುದು. ಆಶ್ರಮದ ಭಾವಿಯ ಶುದ್ಧಿಕರಣ. ಗೋಶಾಲೆಯ ಸ್ವಚ್ಛತೆ. ಗಿಡಗಳಿಗೆ ನೀರು ಹಾಕುವುದು ಮುಂತಾದ ಕಾರ್ಯಗಳಿಂದ ದೇಹವನ್ನು ಪವಿತ್ರ ಮಾಡಿಕೊಂಡರು.

ಬೆಂಗಳೂರಿನಲ್ಲಿ ದಿಕ್ಕು ಕೆಟ್ಟು ಅಲೆಯುತ್ತಿದ್ದ ಸುಂದರನಿಗೆ ಒಂದು ದಿನ ಇದ್ದಕ್ಕಿದ್ದಂತೆ ಹೊಸ ತತ್ವ ಹೊಳೆದು ತನ್ನ ಹೆಂಡತಿ ಹೇಮಾವತಿಯೊಂದಿಗೆ ಹೊಸ ಜೀವನ ನಡೆಸಲು ಮತ್ತೆ ಅಗ್ರಹಾರಕ್ಕೆ ಬರುವನು. ಆನಂದನ ಹತ್ತಿರ ಸುಂದರನು ವಿನಯದಿಂದ ನಿಮ್ಮ ಜತೆಯಲ್ಲಿ ನನಗೂ ಹರಿಜನರ ಸೇವೆಗೆ ಅವಕಾಶ ನೀಡಿ ಎಂದನು. ಕೊನೆಗೆ ಹರಿಜನರಿಗೆ ನಮ್ಮೂರಿನ ದೇವಾಲಯಕ್ಕೆ ಪ್ರವೇಶ ಮಾಡಿಸಬೇಕೆಂಬ ಪಣ ತೊಟ್ಟರು. “ಈ ಕಾರ್ಯದಲ್ಲಿ ವಾಸು, ಗಾನಶಾರದೆ, ಹೇಮಾವತಿ, ಸುಂದರ ಹಾಗೂ ಹಳ್ಳಿಯ ಹರಿಜನರು ದೇವಸ್ಥಾನದ ಪ್ರವೇಶಕ್ಕೆ ಉತ್ಸಾಹಿಗಳಾಗಿದ್ದರು. ಹರಿಜನರೆಲ್ಲಾ ವಾಸುವಿನ ಬೆಂಬಲಕ್ಕೆ ನಿಲ್ಲುವರು. ದೇವಾಲಯ ಒಳಗಡೆ ಹರಿಜನರನ್ನು ಪ್ರವೇಶಿಸಲು ಮೊದಲು ಉತ್ತಮರು ಒಪ್ಪಬೇಕು. ಆನಂತರ ಸರ್ಕಾರ ಒಪ್ಪಬೇಕು. ಈ ಇಬ್ಬರನ್ನು ಒತ್ತಾಯ ಪಡಿಸುವುದಕ್ಕಾಗಿ ವಾಸು ಹರಿಜನರನ್ನು ಒಂದು ದಿನ ಸಭೆಯನ್ನು ಕರೆಯುತ್ತಾನೆ. ಸುತ್ತಲ ಹಳ್ಳಿಯವರೆಲ್ಲಾ ಗೊತ್ತು ಮಾಡಿದ ದಿವಸ ದೇವಾಲಯ ಪ್ರವೇಶವೆಂದೇ ತೀರ್ಮಾನಿಸಿದರು. ದೇವಾಲಯ ಪ್ರವೇಶ ಸಂಬಂಧಿಸಿದ ವಿಚಾರ ಕುರಿತು ಹಸ್ತಪತ್ರಿಕೆಯನ್ನು ಹಂಚುತ್ತಾರೆ. ಐದಾರು ಸಾವಿರ ಹರಿಜನರು ಅಂದು ಅಗ್ರಹಾರಕ್ಕೆ ಬರುವ ಸಿದ್ಧತೆ ಮಾಡಿಕೊಂಡಿದ್ದರು. ಈ ವಿಚಾರವಾಗಿ ಅಗ್ರಹಾರದ ಉತ್ತಮರೆಲ್ಲಾ ಒಂದು ಸಭೆ ಸೇರಿದರು. ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ವಿವರಿಸಿ ಹೇಳುವಂತೆ ವಾಸುವನ್ನು ಆಹ್ವಾನಿಸಿದರು. ವಾಸು ಮತ್ತು ಸುಂದರನು ದೇವಸ್ಥಾನದ ಉತ್ತಮರ ಸಭೆಗೆ ಬಂದರು. ಪದ್ಧತಿಯಂತೆ ಸ್ವಲ್ಪ ವಾಗ್ವಾದಗಳಾದ ನಂತರ ವಾಸುವಿನ ತಂದೆ ಸುಬ್ಬಾಭಟ್ಟರೇ ಸರ್ಕಾರದ ಅಪ್ಪಣೆ ಕೊಟ್ಟರೆ ನಮ್ಮದು ಅಡ್ಡಿಯಿಲ್ಲ ಎಂದು ಹೇಳುತ್ತಾರೆ.” (ಹೇಮಾವತಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಐ.ಬಿ.ಎಸ್ ಪ್ರಕಾಶನ, ಬೆಂಗಳೂರು, 2016 ಪುಟ.307) ಈ ಮೂಲಕವಾಗಿ ಹರಿಜನರ ಉದ್ಧಾರಕ್ಕಾಗಿ ಸಮೂಹಿಕ ಪ್ರಯತ್ನವನ್ನು ಪಟ್ಟರೆ ಮಾತ್ರವೇ ಅವರು ಉದ್ಧಾರವಾಗುವುದಕ್ಕೆ ಸಾಧ್ಯ ಎಂಬುವುದು ಮನವರಿಕೆಯಾಗುವುದು.

ಹರಿಜನರ ಸಭೆಯ ದಿನ ಸಮೀಪಿಸುತ್ತಾ ಬಂತು ಆನಂದನು ಸಭೆ ಮಧ್ಯಾಹ್ನ ಮೂರು ಗಂಟೆಗೆ ಕೊಡಬೇಕೆಂದು ಸಭೆಯಲ್ಲಿ ಮಹಾರಾಜರ ಸರ್ಕಾರವನ್ನು ಮಹಾರಾಜರ ಪ್ರಾರ್ಥಿಸುವ ನಿರ್ಣಯ ಮಾಡಿ ಹರಿಜನರು ನಾಲ್ಕು ಗಂಟೆಯೊಳಗೆ ತಮ್ಮ ಮನೆಗಳಿಗೆ ವಾಪಸ್ಸು ಹೊರಡಬೇಕೆಂದು ಗೊತ್ತು ಮಾಡಿದ್ದನು. ಹೀಗೆ ಗೊತ್ತು ಮಾಡಲು ಒಂದು ಕಾರಣವೂ ಇದ್ದಿತು. ಹರಿಜನರು ಅಗ್ರಹಾರದಲ್ಲಿ ಉಳಿದರೆ ಅವರು ಹೆಂಡ ಕುಡಿದು ಆವಾಂತರ ಮಾಡುತ್ತಾರೆಂದು. ಹೀಗೆ ಯೋಚಿಸುತ್ತಿದ್ದರು ಕೂಡ ಮಧ್ಯಾಹ್ನದ ಎರಡು ಗಂಟೆಯ ವೇಳೆಗೆ ಅಗ್ರಹಾರದ ಹೆಂಡದ ಕಂಟ್ರಾಕ್ಟರನು ಅಂದು ಹೆಚ್ಚಾಗಿ ನಾಲ್ಕು ಲಾರಿ ಹೆಂಡವನ್ನು ತಂದು ಅಗ್ರಹಾರದಲ್ಲಿ ಶೇವಣಿ ಇಟ್ಟಿದ್ದನು. ದೇವಾಲಯ ಪ್ರವೇಶಕ್ಕೆ ಮರುದಿನ ಇದ್ದಕ್ಕಿದ್ದಂತೆ ರಾಮಣ್ಣ ಪೆರುಮಾಳರು ಅಗ್ರಹಾರಕ್ಕೆ ಬರುವರು. ಅಂದು ಸಂಧ್ಯಾಕಾಲದಲ್ಲಿ ರಾಮಣ್ಣ ಪೆರುಮಾಳರು, ಹೇಮಾವತಿ ಆನಂದ ಗಾನಶಾರದೆ ವಾಸು ಎಲ್ಲರೊಂದಿಗೂ ಕಳೆದುಹೋದ ಸಮಾಚಾರಗಳನ್ನೆಲ್ಲಾ ಮಾತನಾಡಿದರು. ಕಾಳನು ಸತ್ತ ಸುದ್ದಿ ಕೇಳಿ ‘ನನ್ನ ಆಪ್ಪನ್ನೇ ಹೋದ’ ಎಂದು ಕೊರಗುತ್ತಾರೆ. ಗಾನಶಾರದೆ ಕಾಳನ ಮಗಳು ಚೆನ್ನಿ ಎಂಬುದನ್ನು ಅರಿತು ಆಶ್ಚರ್ಯಪಡುವರು.

ಸುತ್ತಲೂ ಹತ್ತು ಹದಿನೈದು ಮೈಲಿಗಳ ದೂರದ ಗ್ರಾಮಗಳಿಂದ ಹತ್ತು ಸಾವಿರಕ್ಕೂ ಹೆಚ್ಚಿನ ಹರಿಜನರು ಬಂದು ಅಗ್ರಹಾರದಲ್ಲಿ ಸೇರಿದರು. ನದಿಯಲ್ಲಿ ಸ್ನಾನ ಮಾಡಿ ನಾಮಗಳನಿಟ್ಟುಕೊಂಡು ಸಭಾ ಮಂಟಪದಲ್ಲಿ ಭಜನೆ ಮಾಡುತ್ತಾ ಕುಳಿತರು. ಸಭೆಯಲ್ಲಿ ವಾಸು ಮತ್ತು ಸುಂದರನು ದೇವಾಲಯ ಪ್ರವೇಶದ ಹಕ್ಕನ್ನು ಕುರಿತು ಉಪಾನ್ಯಾಸ ನೀಡಿದರು. ಈ ಅಭಿಲಾಷೆಯನ್ನು ಸರ್ಕಾರದ ಮುಂದೆ ಇಟ್ಟಿದೇವೆಂದು ಸಭೆಯನ್ನು ಮುಗಿಸಿ ಹರಿಜನರನ್ನು ತಮ್ಮ ತಮ್ಮ ಮನೆಗೆ ತೆರಳಲು ಸೂಚಿಸಿದರು.

ಆದರೆ ಹರಿಜನರು ಸಭೆಯಿಂದ ಹೊರಟವರು ತಮ್ಮ ತಮ್ಮ ಹಳ್ಳಿಗಳಿಗೆ ಹೋಗಲಿಲ್ಲ. ಅವರು ಸಭಾ ಮಂಟಪದಿಂದ ಒಂದು ಫರ್ಲಾಂಗು ದೂರ ಮುಂದುವರಿಯುವುದರೊಳಗಾಗಿ ಅವರ ಎದುರಿಗೆ ನಾಲ್ಕು ಲಾರಿ ಹೆಂಡ ಅಗ್ರಹಾರದ ಕಡೆಗೆ ಬರುತ್ತಿರುವುದು ಕಂಡಿತು. ನಾಲ್ಕಾರು ಜನ ಹೊಲೆಯರು ಹೆಂಡದ ಲಾರಿಯ ಹಿಂದೆ ಹೊರಟ ಕೂಡಲೇ ಹದ್ದುಗಳು ಹೆಣವನ್ನು ಅನುಸರಿಸುವಂತೆ ಹರಿಜನರೆಲ್ಲಾ ಲಾರಿಗಳ ಹಿಂದೆ ಹೊರಟರು. ಗಂಡು–ಹೆಣ್ಣು ಮತ್ತು ಮಕ್ಕಳು ಯಥೇಚ್ಚವಾಗಿ ಕುಡಿದರು. ಮತ್ತೆ ಮತ್ತೆ ಸುಧಾರಿಸಿಕೊಂಡು ಕುಡಿದರು. ಹತ್ತು ಸಾವಿರ ಹೊಲೆಯರು ಹೆಂಡದ ಕಂಟ್ರಾಕ್ಟರನು ತಂದಿದ್ದ ಪೆಟ್ರೋಮ್ಯಾಕ್ಸ್‌ನ್ನು ಹಿಡಿದುಕೊಂಡು ಕೈಯಲ್ಲಿ ದೊಣ್ಣೆಗಳನ್ನು ಹಿಡಿದುಕೊಂಡು ಅಗ್ರಹಾರದ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಹೊರಡುವರು.

ಆ ದಿನ ದೇವಾಸ್ಥಾನದಲ್ಲಿ ಊರಿನ ಮುಖಂಡರು ಸೇರಿದರು. "ಹೊಲೆಯರು ಮೂರು ಫರ್ಲಾಂಗ್ ದೂರದಲ್ಲಿ ಬರುತ್ತಿರುವಾಗಲೇ ದೇವಸ್ಥಾನದೊಳಗಿದ್ದವರಿಗೆ ಆ ಸಮುದ್ರದ ಗರ್ಜನೆ ಕೇಳಿಸಿತು. ದೇವಸ್ಥಾನದಿಂದ ಪಲಾಯನ ಮಾಡಬೇಕೆಂದು ಅವರು ಮೊದಲು ಯೋಚಿಸಿದರು. ಆದರೆ ಆ ಯೋಚನೆ ಒಂದು ಗಳಿಗೆ ಮಾತ್ರ ಹೊಳೆದು ಮರುಗಳಿಗೆ ಮಾಯಾವಾಯಿತು. ಒಬ್ಬರೊಂದಿಗೆ ಒಬ್ಬರು ಮಾತನಾಡದೆ ಚರ್ಚಿಸದೆ ಅಲ್ಲೆ ಇದ್ದು ಬರುವುದನ್ನು ಎದುರಿಸಬೇಕೆಂದು ತೀರ್ಮಾನಿಸಿದರು. ಅರ್ಚಕರು ದೇವರ ಸನ್ನಿಧಿಯ ಬಾಗಿಲನ್ನೂ ದೇವಸ್ಥಾನದ ಹೊರ ಬಾಗಿಲನ್ನೂ ಮುಚ್ಚಿದರು. ಎಲ್ಲರೂ ಬಂದು ಮಹಾದ್ವಾರದ ಬಳಿ ನಿಂತರು. ಅಲ್ಲದೆ ಬರುತ್ತಿದ್ದ ಗುಂಪನ್ನು ನೋಡಿ ಭಯವಾಯಿತು. ಬರುತ್ತಿದ್ದವರು ಹಿಡಿದಿದ್ದ ಗಾಸ್ ಲೈಟಿನ ಬೆಳಕಿನಲ್ಲಿ ಹೊಲೆಯರು ಒಂದು ಬಗೆಯ ನಿಶಾಚರರಾಗಿಯೂ ಆಕ್ರಮಣಕಾರರಾಗಿಯೂ ತೋರಿದರು." (ಹೇಮಾವತಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಐ.ಬಿ.ಎಸ್ ಪ್ರಕಾಶನ, ಬೆಂಗಳೂರು, 2016 ಪುಟ 315)

ಆದರೆ ಈ ಆಕ್ರಮಣಕಾರರು ಹತ್ತಿರಕ್ಕೆ ಬರುವುದಕ್ಕೆ ಮುಂಚೆ ದೇವಸ್ಥಾನದ ಹಿಂದಲ ಅಡ್ಡದಾರಿಯಿಂದ ವಾಸು, ರಾಮಣ್ಣ ಪೆರುಮಾಳರು, ಆನಂದ, ಸುಂದರನೂ, ಹೇಮಾವತಿ ಮತ್ತು ಗಾನಶಾರದೆಯರೂ ಬಂದು ದೇವಾಸ್ಥಾನದ ಬಾಗಿಲಿಗೆ ಬಂದರು ಅವರ ಕಣ್ಣಿಗೆ ಮೊದಲು ಬಿದ್ದವರು ವಾಲ್ಮೀಕಿ ಕುಟೀರದವರು. ವಾಸುವಿನ ಹಿಂದೆ ನಿಂತಿದ್ದ ಸುಬ್ಬಾಭಟ್ಟರಿಗೂ ಸುಂದರನ ಹಿಂದೆನಿಂತಿದ್ದ ರಾಮಕೃಷ್ಣನಿಗೂ ತಮ್ಮ ಕೈಯಲ್ಲಿರುವ ದೊಣ್ಣೆಯಿಂದ ಬೀರಿದರು. ಆದರೆ ಆ ಏಟುಗಳನ್ನು ವಾಸು ಮತ್ತು ಸುಂದರನು ತಾವೇ ಮುನುಗ್ಗಿ ತೆಗೆದುಕೊಂಡರು. ಅಲ್ಲಿರುವ ರಾಮಣ್ಣ ಪೆರುಮಾಳರಿಗೂ ಕೂಡ ಏಟು ಬಿದ್ದಿತು.

ಆದರೆ ಹೊಲೆಯರಿಗೆ ನಾವು ಹೊಡೆದಾಡುವುದು ವಾಲ್ಮೀಕಿ ಕುಟೀರದವರೊಡನೆ ಎಂದು ತಿಳಿದು ಸುಮ್ಮನಾದರು. ಆದರೆ ಅವರಿಗೆ ಮುಂದೆ ಕಾಣುತ್ತಿದ್ದು ದೇವಾಸ್ಥಾನದ ಪ್ರವೇಶ ಮಾತ್ರ ದೇವಾಲಯದ ಒಳಕ್ಕೆ ನುಗ್ಗಲೇಬೇಕೆಂದು ಕುಡಿದ ಅಮಲಿನಲ್ಲಿದ್ದ ಅವರಲ್ಲಿ ಗುಜುಗುಜು ಪ್ರಾರಂಭವಾಯಿತು. ಇವರು ಶಾಂತರಾಗದ ಹೊರತು ಯಾವುದು ಕೂಡ ಉಳಿಯುವುದಿಲ್ಲವೆಂದು ಆನಂದ ಮತ್ತು ರಾಮಣ್ಣ ಪೆರುಮಾಳರ ಅರಿವಿಗೆ ಬಂದಿತು. ಈ ಸಮಯದಲ್ಲಿ ಆನಂದನು ಒಂದೆರೆಡು ತಿಳುವಳಿಕೆಯ ಮಾತುಗಳನ್ನು ಹೇಳಲು ಹೋದನು. ಆದರೆ ಪ್ರಯೋಜನವಾಗಲಿಲ್ಲ. ಪೆರುಮಾಳರು ಆನಂದನಿಗೆ ತನ್ನಜ್ಜ ಶ್ರೀನಿವಾಸ ಪೆರುಮಾಳರನ್ನು ಜ್ಞಾಪಿಸಿಕೋ ಎಂದು ಹೇಳಿದಾಗ ಆನಂದನು ಹೊಸ ಸ್ಪೂರ್ತಿ ಬಂದಂತೆ ಆಗಿ ನಿಧಾನವಾಗಿ ಹಾಡಲು ಪ್ರಾರಂಭಿಸಿದನು. ಅವನ ಗಾಯನ ಕೇಳಿ ಅಶಾಂತವಾಗಿದ್ದ ಕುಡುಕರು ಮೆಲ್ಲಮೆಲ್ಲನೆ ಶಾಂತಚಿತ್ತದಿಂದ ನೆಲದ ಮೇಲೆ ಕುಳಿತುಬಿಟ್ಟರು. ಸತತವಾಗಿ ಎರಡು ಗಂಟೆ ಹಾಡಿದ ಬಳಿಕ ನಿಶ್ಯಬ್ದವಾಗಿದ್ದ ಜನತೆಯನ್ನುದ್ದೇಶಿಸಿ ನಿಮ್ಮ ಮನೆಗಳಿಗೆ ಹೋಗಿ ಎಂದನು. ಆಗ ಜನತೆ ಮರುಮಾತನಾಡದೆ ರಾತ್ರಿಯ ಬೆಳದಿಂಗಿಳಿನಲ್ಲಿ ಹೊರಟು ತಮ್ಮ ತಮ್ಮ ಹಳ್ಳಿಗಳಿಗೆ ಹೋಗಿ ಮನೆ ಸೇರಿದರು.

ವಾಸುವಿಗೆ ತುಂಬ ಬಲವಾಗಿ ಏಟುಬಿದ್ದಿತು. ಆನಂದನು ಹಾಡುಹೇಳುತ್ತಿರುವಾಗಲೇ ದೇವಸ್ಥಾನದ ಒಳಗಡೆ ಗಾನಶಾರದೆ ವಾಸುವಿಗೂ, ಹೇಮಾವತಿ ಸುಂದರನಿಗೂ ಶುಶ್ರೂಷೆ ಮಾಡುತ್ತಿದ್ದರು. ಗಾನಶಾರದೆ ಬಟ್ಟೆಯ ಚೂರನಲ್ಲಿ ಗಾಯವನ್ನು ತೊಳೆಯಲು ನೀರನ್ನು ಕೇಳಿದಾಗ ಸುಬ್ಬಾಭಟ್ಟರು ಕೇವಲ ಭಕ್ತನ ನಮ್ರಭಾವದಿಂದ ಆಕೆ ಕೇಳಿದ ಸಾಮಾನುಗಳನ್ನು ಕೊಟ್ಟರು. ಗಾಬರಿಯಲ್ಲಿ ಭಟ್ಟರು ದೇವರ ತೀರ್ಥದ ಬಟ್ಟಲಿನಲ್ಲಿಯೇ ನೀರನ್ನು ತಂದು ಗಾನಶಾರದೆಯ ಮುಂದೆ ಇಟ್ಟರು.

ಅಗ್ರಹಾರದ ದೇವಸ್ಥಾನದಿಂದ ವಾಸು, ಸುಂದರನ ಶುಶ್ರೂಷೆಗಾಗಿ ಕುಟೀರಕ್ಕೆ ಕರೆದು ತಂದರು ಭಟ್ಟರು ವಾಸು ಮನೆಗೇ ಬರಲಿ ಎಂದಾಗ ಆನಂದನು ವಾಸುವಿನ ಆರೈಕೆ ಇಲ್ಲೇ ನಡೆಯಲ್ಲಿ ಎಂದಾಗ, ಸುಬ್ಬಾಭಟ್ಟರು ನನ್ನ ಸೊಸೆಯೂ ಕೂಡ ನನ್ನ ಮನೆಗೆ ಬರಲಿ ಎಂದರು. ಈ ಮಾತನ್ನು ಕೇಳಿದ ಪ್ರತಿಯೊಬ್ಬರಿಗೂ ವಿದ್ಯುತ್ ಸ್ಪರ್ಶವುಂಟಾಯಿತು. ವಾಸು ಒಂದು ಗಳಿಗೆ ಉಸಿರಾಡುವುದನ್ನೇ ನಿಲ್ಲಿಸಿದನು. ಗಾನಶಾರದೆಯ ಹೃದಯ ಅವಳ ಬಾಯಿಗೆ ಬಂದಿತು. ಆನಂದನು ಆಶ್ಚರ್ಯದಿಂದ ಸುಂದರ ಹೇಮಾವತಿಗೂ ಕೂಡ ಯಾರು ಒಂದು ಗಳಿಗೆ ಚಲಿಸಲೇ ಇಲ್ಲ.

ವಾಸುವಿಗೂ ಸುಂದರನಿಗೂ ಚೆನ್ನಾಗಿ ಗುಣವಾದನಂತರ ಒಂದು ದಿನ ಆನಂದ ಎಲ್ಲರನ್ನೂ ಕೂರಿಸಿಕೊಂಡು "ಅಪ್ಪಾ, ದೇವಾಲಯ ಪ್ರವೇಶ ನಮ್ಮ ಗುರಿಯಾದರೂ ಉತ್ತಮರ ಒಪ್ಪಿಗೆಯಿಲ್ಲದೆ ಬಲಾತ್ಕಾರವಾಗಿ ನಾವು ಅಲ್ಲಿ ಹೊಗುವಂತಿಲ್ಲ. ಗುರಿ ಉದ್ದೇಶವನ್ನು ನಾವು ಸೂಚಿಸಿದ್ದೇವೆ. ಇನ್ನು ವಾಲ್ಮೀಕಿ ಕುಟೀರದಲ್ಲಿ ಸರ್ವರಿಗೂ ಸುಲಭ ದೃಶ್ಯವಾದ ದೇವರನ್ನು ಸ್ಥಾಪಿಸೋಣ. ಯಾರು ಬೇಕಾದರೂ ಪೂಜೆ ಮಾಡಿಕೊಳ್ಳಲಿ ಎಂದನು. ಶನಿವಾರ ವಾಲ್ಮೀಕಿ ಕುಟೀರದಲ್ಲಿ ದೇವರ ಸ್ಥಾಪನೆಯಾಯಿತು. ಒಂದು ಕಡೆ ಪೆರುಮಾಳರು ಶಠಾರಿಯವರು ಸುಂದರ ವಾಸು ಸುಬ್ಬಾಭಟ್ಟರು ಕೈ ಮುಗಿದುಕೊಂಡು ನಿಂತಿದ್ದರು. ಮತ್ತೊಂದು ಕಡೆ ಗಾನಶಾರದೆ ಹೇಮಾವತಿ ರಂಗನಾಯಕಿ ಸುಬ್ಬಾಭಟ್ಟರ ಹೆಂಡತಿ ಅಗ್ರಹಾರದ ಇನ್ನೂ ಕೆಲವು ಸ್ತ್ರೀ ಪುರುಷರು ನೆರೆದಿದ್ದರು. ವಾಲ್ಮೀಕಿ ಕುಟೀರದ ತುಂಬ ಹರಿಜನರು, ಬೆಸ್ತರು, ಬೇಡರು,

ಅಗಸರು, ಗೌಡರುಗಳು, ವೀರಶೈವರು ಮತ್ತು ಬ್ರಾಹ್ಮಣರು ತುಂಬಿದ್ದರು. ಅಲ್ಲಿಗೆ ಬರದೆ ಇದ್ದ ಉತ್ತಮರು ಅಗ್ರಹಾರದಲ್ಲಿದ್ದರು. ಆಗ ಹೇಮಾವತಿ ಗಾನಶಾರದೆಯರ ಕಂಠದಿಂದ ದೇವಲೋಕದ ಮಧುರ ಗಾನ ಹೊರಟಿತು.**"** (ಹೇಮಾವತಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಐ.ಬಿ.ಎಸ್ ಪ್ರಕಾಶನ, ಬೆಂಗಳೂರು, 2016, ಪುಟ 322)

ಕಾದಂಬರಿಯ ಕೊನೆಯಲ್ಲಿ ಗಾನಶಾರದೆಯು ಸಾಂಕೇತಿಕವಾಗಿ ನರಸಿಂಹಸ್ವಾಮಿ ದೇವಾಸ್ಥಾನದೊಳಗೆ ಪ್ರವೇಶವನ್ನು ಮಾಡುತ್ತಾಳೆ. ಆದರೆ ಎಲ್ಲರಿಗೂ ಮುಕ್ತವಾಗಿ ಪ್ರವೇಶ ದೊರೆಯದೆ ಇದ್ದಾಗ ವಾಲ್ಮೀಕಿ ಕುಟೀರದವರು ಸರ್ವಧರ್ಮದ್ದವರಿಗೂ ಮುಕ್ತವಾಗಿ ಪ್ರವೇಶಿಸುವಂತಹ ದೇವರನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಿ, ಪ್ರತಿಷ್ಠಾಪಿಸುತ್ತಾರೆ. ಇದೆಲ್ಲಾರ ನಡುವೆ ಇದ್ದಕಿದ್ದಂತೆ ಆನಂದನು ಕಣ್ಮರೆಯಾಗುವುದರ ಮೂಲಕ ಕಾದಂಬರಿ ಮುಕ್ತಾಯಾವಾಗುತ್ತದೆ.

**ಆಕರ ಗ್ರಂಥಗಳು**


- ಗೊರೂರು ರಾಮಸ್ವಾಮಿ ಅಯ್ಯಂಗಾರ್. *ಹೇಮಾವತಿ.* ಐ.ಎಸ್.ಬಿ ಪ್ರಕಾಶನ.
- ಪುಟ್ಟಯ್ಯ, ಬಿ.ಎಂ. *ಕನ್ನಡ ದಲಿತ ಸಾಹಿತ್ಯ ಮತ್ತು ಪ್ರತಿಸಂಸ್ಕೃತಿ.* ಕನ್ನಡ ವಿಶ್ವವಿದ್ಯಾಲಯ, ಹಂಪಿ
- ಸತ್ಯಮಂಗಲ ಮಹಾದೇವ (ಸಂ.) *ದಲಿತ ಸಾಹಿತ್ಯ ಸಂಪುಟ ವಿಮರ್ಶೆ.* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.